ಅಪರಂಜಿ

ಸಂಪುಟ ೫
ಜುಲೈ ೧೯೮೮
ಸಂಚಿಕೆ ೧೦

ತಿಳಿನಗೆಯ ಕಾರಂಜಿ



- ☐ ಆನಂದ್
- ☐ ಶಿವರಾಮ ಕಾರಂತ
- ☐ ಜಿ. ಎನ್. ಜಿ.
- ☐ ಶಿವು
- ☐ ಬಿ. ಸಿ.
- ☐ ಲೀಲಾ ಮಿರ್ಲೆ
- ☐ ದಾಶರಥಿ ದೀಕ್ಷಿತ್
- ☐ "ಗುರುವ"
- ☐ ಶ್ರೀನೂ

ಬಿಡಿಪ್ರತಿ : ಕೇವಲ ಒಂದೂವರೆ ರೂಪಾಯಿ





(ತಿಳಿನಗೆಯ ಕಾರಂಜಿ)

ಸಂಪುಟ ೫ ಜುಲೈ ೧೯೮೮ ಸಂಚಿಕೆ ೧೦

ಚಂದಾ ವಿವರ :

ಬಿಡಿ ಪ್ರತಿ ·

ಒಂದೂವರೆ ರೂಪಾಯಿ

ವಾರ್ಷಿಕ ಚಂದಾ : 15 ರೂ.

ಆಜೀವ ಚಂದಾ 150 ರೂ.

ಪೋಷಕರು 500 ರೂ.

ಗೌರವ ಸಲಹೆಗಾರರು :

ಶ್ರೀ ಅ. ರಾ. ಸೇ.

ಶ್ರೀ ಶೇಷಗಿರಿ

ವಿಳಾಸ :

ಅಪರಂಜಿ ಕಾರ್ಯಾಲಯ

119 [ಹಳೆಯ 36]

6ನೆ ಮುಖ್ಯ ರಸ್ತೆ

ಮಲ್ಲೇಶ್ವರಂ

ಬೆಂಗಳೂರು 560003

ಸಂಪಾದಕ :

ಶಿವಕುಮಾರ್

ತಿಂಗಳ ಹಳೆಯ ಜೋಕು

ಕಾಡಿನಲ್ಲೊಮ್ಮೆ ಹಿಡಿಂಬೆಯೊಡನೆ ವಾಕಿಂಗ್ ಹೋಗುತ್ತಿದ್ದಾಗ, ಪುಷ್ಕರಣಿಯ ಬಳಿ ವಿಹಾರಕ್ಕೆ ಸಖಿಯೊಡನೆ ಬಂದಿದ್ದ ದ್ರೌಪದಿ ಭೀಮಸೇನನನ್ನು ಕಂಡಳಂತೆ.

"ಸೌಭಾಗ್ಯವೇ ಆರ್ಯಪುತ್ರ ?" ಎಂದು ಕೊಂಕು ನುಡಿದಳಂತೆ ದ್ರೌಪದಿ.

ಬೇಗ ಬೇಗ ಮುಂದೆ ನಡೆದ ಭೀಮನನ್ನು ಹಿಡಿಂಬೆ ಕೇಳಿದಳಂತೆ.

"ಅಷ್ಟು ಸಲಿಗೆಯಿಂದ ಮಾತನಾಡಿಸಿದ ಆ ಚಲುವೆ ಯಾರು ?"

"ನಾಳೆ ಅವಳ ಹತ್ತಿರ ನೀನು ಯಾರು ಅಂತ ತಿಳಿಸೋ ಹೊತ್ತಿಗೆ ಸುಸ್ತು ಬಡಿದು ಹೋಗ್ತೀನಿ. ಈಗ ನೀನೂ ಯಾಕೆ ಸತಾಯಿಸ್ತಿ" ಅಂತ ಭೀಮ ಗೋಳಿಟ್ಟನಂತೆ.

ಈ ಸಂಚಿಕೆಯಲ್ಲಿ......

ವ್ಯಂಗ್ಯ ಚಿತ್ರಗಳು : ಬಾಗೂರು ಮಾರ್ಕಾಂಡೇಯ, ಅಶ್ವಥ್, ಚಂದ್ರು

ಮುದ್ರಣ :ಇಂಪ್ರೆಷನ್ಸ್ ಪ್ರಿಂಟರ್ಸ್, ಮಲ್ಲೇಶ್ವರಂ,
ಬೆಂಗಳೂರು-3. ದೂರವಾಣಿ : 363444

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ ೫ ಜುಲೈ ೧೯೮೮ ಸಂಚಿಕೆ ೧೦

ತನ್ನ ಕಾಮಕ್ಕಾಗಿಯೇ ಉಳಿದ ವಸ್ತುಗಳೂ ವ್ಯಕ್ತಿಗಳೂ ಪ್ರಿಯವಾಗುತ್ತವೆ. ಆದುದರಿಂದ ಆತ್ಮನು ಪ್ರಿಯತಮನು.

—ಬೃಹದಾರಣ್ಯಕ.

ತನಗಿಲ್ಲದ್ದು ಎಲ್ಲಿದ್ದರೇನು ? ತಾನುಂಟೋ, ಮೂರು ಲೋಕವುಂಟೋ ಎಂದು ಜನ ವ್ಯವಹರಿಸುತ್ತಾರೆ. 'ತಾನು' ಇಲ್ಲವೆಂದು ಹೇಳಲು ಬರುವುದೂ ಇಲ್ಲ. ಆದರೆ ಈ 'ತಾನು' ಎಂಬುದೇನು, ಯಾರು ? ಎಂದು ಯಾರೂ ಅರಿಯರು.

'ತಾನು' ಎಂದರೆ ತನ್ನ ದೇಹವೆಂದೋ, ಮನಸ್ಸೆಂದೋ ತಿಳಿದಿರುವವರೇ ಎಲ್ಲಾ. ನಾನು ಯಾರು ಎನ್ನುವುದು ಮೂರ್ಖತನದ ಪ್ರಶ್ನೆ ಎಂದೇ ಎಲ್ಲರೂ ನಂಬಿದ್ದಾರೆ.

ನಾನು ದೇಹ ಎನ್ನುವುದು ಅಸುರರ ಜ್ಞಾನ. ಉಪನಿಷತ್ತಿನಲ್ಲಿ ಹೇಳಿರುವ ಆತ್ಮನನ್ನು 'ನಾನು' ಎಂದು ಅನುಭವಕ್ಕೆ ತಂದುಕೊಳ್ಳಬೇಕು. ಅದೆಲ್ಲಾ ಬಲು ರಿಸ್ಕಿನ ಕೆಲಸ. ಆದುದರಿಂದಲೇ ಹೆಚ್ಚು ಹೆಚ್ಚು ಸ್ವೇಚ್ಛಾಚಾರವನ್ನು ಪ್ರೋತ್ಸಾಹಿಸುವ ವಿಚಾರಧಾರೆಗಳು ಸಂಖ್ಯಾ ಬಲದಿಂದ ಪ್ರಾಬಲ್ಯ ಪಡೆಯಲು ಯತ್ನಿಸುತ್ತವೆ.

ತನ್ನಂತೆ ಪರರನ್ನು ಕಾಣಬೇಕಲ್ಲವೇ ? ಆಲ್ರೈಟ್. ಎಲ್ಲರೂ ನನ್ನನ್ನು ಹಿಂಸಿಸುತ್ತಿದ್ದಾರೆ. ಅವರ ಕೊಡುಗೆಯನ್ನು ಬಡ್ಡಿ ಸಮೇತ ತೀರಿಸುತ್ತೇನೆ ಎಂದೇ ಸ್ವತಂತ್ರ ಪ್ರಜೆಗಳು ವರ್ತಿಸುತ್ತಾರೆ. ಥೋಡಾ ಹೈ, ಮೈದಾನ್ ಹೈ ಎನ್ನುತ್ತಾರಷ್ಟೆ. ತಂಗಟಿ ಜಲ್ದೀ ಭೀ ಹೈ ಎಂದು ಸೇರಿಸಿಕೊಂಡಿದ್ದಾರೆ.

ಅಪರಂಜಿ ಕಿಡಿ

—ಆನಂದ್

ಸ್ನಾತಕೋತ್ತರ ಸಸ್ಯಶಾಸ್ತ್ರ ವಿದ್ಯಾರ್ಥಿಗಳಿಂದ ಪರೀಕ್ಷೆಯಲ್ಲಿ ಅಕ್ರಮ.

—ಸುದ್ದಿ

ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ ?

*   *   *   *

ರಾಜಕೀಯ ಉದ್ದೇಶಕ್ಕೆ ಧಾರ್ಮಿಕ ಸ್ಥಾನ ಬಳಕೆ ತಡೆ; ಸುಗ್ರೀವಾಜ್ಞೆ ಜಾರಿ.

—ಪತ್ರಿಕೆ

ಹಾಗಾದರೆ, ಚುನಾವಣೆಗೆ ಮುನ್ನ ರಾಜಕಾರಣಿಗಳು ದೇವರಿಗೆ ಪೂಜೆ ಸಲ್ಲಿಸುವ ಹಾಗಿಲ್ಲವಲ್ಲ !

*   *   *   *

ಸರ್ಕಾರದ ಬೊಕ್ಕಸದಲ್ಲಿ ಹಣವೇ ಇಲ್ಲ; ನಮಗೆ ಮಂತ್ರಿಗಳಾಗಲು ಇಷ್ಟವಿಲ್ಲ.

—ವಿರೋಧ ಪಕ್ಷದ ನಾಯಕಿ

ಆಹಾ !

*   *   *   *

ಮೈಸೂರು ಖನಿಜ ಕಂಪೆನಿ ನಾಲ್ಕು ಅಧಿಕಾರಿಗಳ ವಜಾ.

—ಪತ್ರಿಕೆ

ಅನರ್ಘ್ಯ ರತ್ನಗಳಿರಬೇಕು ! !

*   *   *   *

ರಸ್ತೆ ಸುರಕ್ಷತೆಗೆ ಹೆದ್ದಾರಿಗಳಲ್ಲಿ ಎಚ್ಚರಿಕೆ ಫಲಕಗಳು.

—ಪತ್ರಿಕೆ

ಈ ಫಲಕಗಳನ್ನು ಓದುತ್ತ ಕಾರು ನಡೆಸಬಾರದೆಂದು ಇನ್ನೊಂದು ಫಲಕ ಹಾಕುತ್ತಾರೇನೋ ?

*　　*　　*　　*

ಮೀನು ಉತ್ಪಾದನೆ ಹೆಚ್ಚಿಸಲು ಶೀಘ್ರವೇ ತಜ್ಞರ ವರದಿ.

—ಪತ್ರಿಕೆ

ವರದಿ ಬೇಗ ಹೊರಬರದಿದ್ದರೆ ವಾಸನೆ ಬಂದೀತು !

*　　*　　*　　*

ಕೆಲವು ಮಂತ್ರಿಗಳಿಗೆ ಮನಸ್ಸಿನಲ್ಲಿ ಇರುವುದೇ ಒಂದು; ಮಾತನಾಡುವುದೇ ಮತ್ತೊಂದು.

—ಸದನದಲ್ಲಿ ಹೇಳಿಕೆ

'ಇತರ' ಮಂತ್ರಿಗಳು ಇದ್ದಾರಲ್ಲ ಎಂದು ಅಪರಂಜಿ ಖುಷಿ ಪಟ್ಟಳಂತೆ !

*　　*　　*　　*

ಪೈಲ್ವಾನರಿಗೆ ಮಾಸಾಶನ ನೀಡುವ ಬಗ್ಗೆ ಆದಷ್ಟು ಬೇಗ ತೀರ್ಮಾನ.

—ಸಚಿವರು

ಹೌದು, ಅದೇ ಕ್ಷೇಮ !

O　　O　　O　　O

ಇಹೆ ನಾನು ಸೇತುರಾಮ

—ಶಿವರಾಮ ಕಾರಂತ

ನುಡಿ ಬೊಮ್ಮ, ನಡೆ ಬೊಮ್ಮನಾದ ಬ್ರಹ್ಮರಾರಿದ್ದರೂ
ಇಲ್ಲದಿರೆ ನಾನೊಬ್ಬ—ಸರಸತಿಯ ನಾಡಿನಲಿ
ಮೂಸಿ ನೋಡರು ಯಾರೂ—
ಅವರಿವರ ಕೂಸುಗಳ,
ಆ–ಅವರಿವರ ಕೂಸುಗಳ
ಹೆಸರಿಟ್ಟು ಕರೆಯಲು ನಾನು—
'ಹಾಗುಂಟೆ, ಹೀಗುಂಟೆ
ಅರ್ಥ ಲಾವಣ್ಯಗಳ ನಂಟು'
ಎಂದು ಲೋಕದ ಅರಿವ ಕೆದಕಿ ಎಚ್ಚರಿಸಲ್ಕೆ
ಇಲ್ಲದ್ದು ಉಂಟಕ್ಕು, ಇದ್ದದ್ದು ಇಲ್ಲಕ್ಕು
ಬಿದ್ದುದರೆ ಬಕ್ಕು ಚೇತನ, ಇದ್ದುದಕೆ ಸಾರ್ಥಕ್ಯ
ಅಂತಿರಲು ಎನ್ನ ಸ್ಥಾನಮಾನಕೆ ಬರದು ವಾರ್ಧಕ್ಯ
ನಾನೊಬ್ಬನಿಲ್ಲದಿರೆ–ಇರುವುದೆಲ್ಲವು ಶೂನ್ಯ,
ಅಜ್ಜ ತಜ್ಜರ ನಡುವೆ ಇಹೆ ನಾನು ಸೇತುವಾಗಿ.

ಚಪ್ಪಲಿ ರಿಪೇರಿ

—ಜಿ. ಎಸ್. ಜಿ.

ಬೆಂಗಳೂರಿನಿಂದ-ಬುಲಾವ್—ಬಂದಿತ್ತು. ಕೂಡಲೇ ಹೊರಟೆ. ಮಟ-ಮಟ-ಮಧ್ಯಾಹ್ನ ಊರು ಬಿಟ್ಟಾಗ. ಆರು ಗಂಟೆ ಪ್ರಯಾಣ. ಬೆಂಗಳೂರು ಸೇರಿದಾಗ—ಸಂಜೆ ಏಳಾಗಿತ್ತು. ಕೈಲಿ ಭಾರವಾದ ಸೂಟ್‌ಕೇಸು. ರೀಕ್ಷಾ ಸ್ಟ್ಯಾಂಡ್ ದಾಟಿ ಬಿ.ಟಿ.ಎಸ್. ಫ್ಲೈ ಓವರ್‍ನ—ಉಸಿರುಸಿರು ಬಿಡುತ್ತಾ ಹತ್ತುತ್ತಿದ್ದೆ.

ತುಂಬಾ ಆತ್ಮೀಯವಾದ—ಪ್ರೇಮ ಭರಿತ ದನಿಯೊಂದು ಕರೆಯಿತು.

"ಸಾರ್ ಸ್ವಲ್ಪ ಬನ್ನಿ

ದನಿಯ ಇಂಪಿಗೆ ಮನಸೋತಿತು—ಕಾಲು ನಿಂತಿತು. ಕರೆದವನು ಒಬ್ಬ ಚಪ್ಪಲಿ ರಿಪೇರಿಯವ. ತದೇಕ ಚಿತ್ತನಾಗಿ—ನನ್ನ ಹಳೆಯ ಕೆರದ್ವಯುಗಳನ್ನು-ದಿಟ್ಟಿಸಿ ನೋಡುತ್ತಿದ್ದ. ನನ್ನ ಪಾದರಕ್ಷೆಗಳಿಗೆ ಅವನು ಪೂರಾ ಸೋತಿದ್ದ.

"ಚಪ್ಪಲಿ ಬಿಡಿ ಸಾರ್" ಎಂದ.

ನಾನು ಹಿಂತೆಗೆದೆ.

"ಇಲ್ಲ ಸಾರ್-ನಾನು ಏನೂ ಮಾಡುವುದಿಲ್ಲ-ನಿಮ್ಮ ಚಪ್ಪಲಿ ನಿಮಗಿಂತಲೂ ಚೆನ್ನಾಗಿದೆ—ನೋಡ್ತೀನಿ ಅಷ್ಟೆ" ಎಂದ.

ಚಪ್ಪಲಿಗಳನ್ನು ಬಿಟ್ಟೆ. ಅವು, ತೆಳುವಾದ ಅಟ್ಟೆಯುಳ್ಳ—ಹಗುರವಾದ ಹಳೆಯ ಚಪ್ಪಲಿಗಳು. ಬಿಳಿಯದು ಅಲ್ಲ-ಹಾಲು ಬಣ್ಣದ ಪಟ್ಟಿಯ ಹಳೆಯ ಹರುಕ ಚಪ್ಪಲಿ—ಅವುಗಳ ಮೇಲೆ—ಅವನದು ಅದೆಂತಹ ಮೋಹವೋ ನಾನು ಕಾಣೆ. ನನ್ನ ಚಪ್ಪಲಿಗಳನ್ನು ಬಟ್ಟೆಯಿಂದ ನವಿರಾಗಿ ಒರೆಸಿದ. ಹಗುರವಾಗಿ ಬ್ರಷ್ ಮಾಡಿದ. ತನ್ನ ಮುಖದ ಬಳಿ ಹಿಡಿದ. ಸಧ್ಯಕ್ಕೆ ಮುತ್ತಿಡಲಿಲ್ಲ.

"ಇದಕ್ಕೆಷ್ಟು ಕೊಟ್ಟಿರಿ ?"

"ನಲವತ್ತೈದು"

"ಛೇ! ಛೇ! ಸುಳ್ಳು ಹೇಳ್ತೀರಾ–ಎಪ್ಪತ್ತಕ್ಕೆ ಕಡಿಮೆ ಕೊಟ್ಟಿಲ್ಲ ಇದಕ್ಕೆ"

ಪಿಗ್ಗಿ–ಹೀರೇಕಾಯಿ ಆದೆ ನನ್ನ ಜೀವಮಾನದಲ್ಲಿ ಒಂದು ವಸ್ತುವನ್ನಾದರೂ ಕಡಿಮೆ ಬೆಲೆಗೆ ಕೊಂಡಿದ್ದೇನೆ. ನಿಜಕ್ಕೂ ಈಚೆಗೆ ವ್ಯವಹಾರ ಕುಶಲಿಯಾಗುತ್ತಿದ್ದೇನೆ. ಚಪ್ಪಲಿ ರಿಪೇರಿ ಮಾಡುವವನೇ–ನನಗೆ ಪ್ರಶಸ್ತಿಯನ್ನು ಕೊಟ್ಟಿದ್ದಾನೆ. ಕೂಡಲೇ ಅವನಿಂದ ಪ್ರಶಸ್ತಿಯನ್ನು ಬರೆಸಿಕೊಂಡು-ಅವನ ಸಹಿ ಹಾಕಿಸಿ–ಊರಿಗೆ ಹೋಗಿ ವ್ಯವಹಾರ ಶೂನ್ಯನೆಂದು ನನ್ನನ್ನು ಕರೆಯುವ ನನ್ನ ಮಡದಿಗೆ ತೋರಿಸಲೇಬೇಕೆಂದು ಮನಸ್ಸಾಯಿತು. ಸಂಭ್ರಮದೀದ....

"ಇಲ್ಲಪ್ಪಾ–ಇದಕ್ಕೆ-ನಾನು ಕೊಟ್ಟದ್ದೇ ನಲವತ್ತೈದು" ಎಂದೆ.

"ನಿಜಕ್ಕೂ–ನೀವು Lucky ಸಾರ್–ಇದು ಸಿಂಗಲ್ ಸೋಲ್–ಬಹಳ ಚೆನ್ನಾಗಿದೆ-ಈ ಥರದ್ದು-ನಿಮ್ಮಂಥವರಿಗಲ್ಲ-ಇಷ್ಟು ಕಡಿಮೆ ಬೆಲೆಗೆ ಎಲ್ಲೂ ಸಿಗೋಲ್ಲ"

"Thanks–ಚಪ್ಪಲಿ ಕೊಡಪ್ಪ-ನಾನು ಹೋಗಬೇಕು" ಎಂದೆ.

"ನಿಮ್ಮ ಚಪ್ಪಲಿ ನಾನು ಯಾಕೆ ಇಟ್ಟುಕೊಳ್ಳಲಿ–ನೋಡಿ–ಈ ಉಂಗುಷ್ಟದ ಬಳಿ–ಸೋಲು–ಬಾಯಿ ಬಿಟ್ಟಿದೆ–ಅಂಟಿಸಬೇಕು. ಆದರೆ ಫೆವಿಕಾಲು ಪ್ರಯೋಜನವಿಲ್ಲ-ರಿವಿಟ್ ಹಾಕಿದರೆ ಇನ್ನಾರು ತಿಂಗಳು ಗ್ಯಾರಂಟಿ–ರಿವಿಟ್ಟು ಹಾಕಲೇ?" ಎಂದ.

ಅವನ ಮಾತಿನ ಮೋಡಿಗೆ ಮರುಳಾದ ನಾನು ತಲೆ ಹಾಕಿದೆ. ಅವನು ಒಂದು ರಿವಿಟ್ ಎಂದವನು ಒಂದೊಂದು ಚಪ್ಪಲಿಗೂ ಹತ್ತು ಹತ್ತು ರಿವಿಟ್ ಹೊಡೆದಿದ್ದ. ರಿವಿಟ್ ಭೂಷಿತ ನನ್ನ ಚಪ್ಪಲಿಗಳು-ಓಲೆ–ಮೂಗುತಿಗಳಿಂದ ಹೊಳೆಯುವ–ಕನ್ಯೆಯಂತೆ ಅಲ್ಲದಿದ್ದರೂ–ತುಂಬಿದ ಮುತ್ತೈದೆಯಂತೆ ಫಳ–ಫಳನೆ ಹೊಳೆಯುತ್ತಿದ್ದವು. ಚಪ್ಪಲಿ ರಿಪೇರಿಯವನನ್ನು ಮನಸಾರೆ ವಂದಿಸಿದೆ. ಪುನಹ–ಅವುಗಳನ್ನು ಬ್ರಷ್‌ಮಾಡಿ–ಒರೆಸಿ–ಕೊಡಲಾರದ ಮನಸ್ಸಿನಿಂದ ತಿರುಗಿಕೊಟ್ಟ.

"ಎಷ್ಟು ಕೊಡಲಪ್ಪ" ಎಂದೆ.

ಈಗ ಪ್ರಾರಂಭವಾಯಿತು ನಿಜವಾದ ನಾಟಕ.

"ಇಪ್ಪತ್ತು ರೂಪಾಯಿ" ಎಂದ.

"ಏನಯ್ಯಾ–ಮೊಳೆಗೊಂದು ರೂಪಾಯಿಯೇ–ನಾನು ಅಷ್ಟೊಂದು–ಮೊಳೆಗಳನ್ನು ಹೊಡೆಯಲು ಹೇಳಿದ್ದೆನೆ?" ರೇಗಿದೆ.

“ನೋಡಿ–ಚಪ್ಪಲಿ ಚೆನ್ನಾಗಿದೆ–ಬೇಗ ಕೀಳುವುದು ಬೇಡ ಎಂದು ಹೊಡೆದೆದ್ದು ನೀವು ಹೊಡೆಯುವವರೆಗೂ ಸುಮ್ಮನಿದ್ದು ಈಗ ಜೋರು ಮಾಡ್ತೀರಲ್ಲ ?” ಅವನೂ ರೇಗಿದ.

“ಹೀಗೆ ಮೋಸ ಮಾಡಬಾರದು” ಎಂದೆ,

“ಮೋಸ_ಗೀಸ ಅಂತ ಅನ್ನಬೇಡಿ–ನಿಮ್ಮ ಎದುರಿಗೆ ಮೊಳೆ ಹೊಡೆದಿದ್ದೇನೆ ಇವು ಸ್ಟೀಲು ರಿವಿಟ್‌ಗಳು”

“ನಿನ್ನ ರಿವಿಟ್ಟು ಯಾರಿಗೆ ಬೇಕಯ್ಯಾ ?”

ನನ್ನ ಚಪ್ಪಲಿಗಳನ್ನು ಕೂಡಲೇ ಕಿತ್ತುಕೊಂಡ. “ಹಾಗಾದರೆ ಅವುಗಳನ್ನು ಕಿತ್ತು ತೆಗೆಯುತ್ತೇನೆ”

ಎಂದವನೇ–ಇಕ್ಕಳದಿಂದ ಒಂದು ಮೊಳೆಯನ್ನು ಕಿತ್ತೇ ಬಿಟ್ಟ. ಮೊಳೆ ಕಿತ್ತ ಸ್ಥಳದಲ್ಲಿ ಒಂದು ರಂಧ್ರವಾಗಿತ್ತು.ಸುಮಾರಾಗಿ ದೊಡ್ಡ ರಂಧ್ರವೇ ಅದು. ಒಂದು ಕಡೆಯಿಂದ ಅದರ ಮೂಲಕ ನೋಡಿದರೆ–ಇನ್ನೊಂದು ಕಡೆಯಿಂದ ಬೆಳಕು ಸ್ಪಷ್ಟವಾಗಿ ಕಾಣುತ್ತಿತ್ತು. ಒಂದೊಂದು ಚಪ್ಪಲಿಗೂ ಇಂಥಹ ಹತ್ತು ರಂಧ್ರಗಳು! ಅಂದರೆ ಮನೆ ಸೇರುವ ವೇಳೆಗೆ ಚಪ್ಪಲಿಗಳು ಖಂಡಿತಾ ನನ್ನನ್ನು ಬಿಟ್ಟಿರುತ್ತವೆ ಒಳ್ಳೆಯ ಗ್ರಹಚಾರವಾಯ್ತಲ್ಲ ! ಪೋಲಿಸ್‌ಗೆ ಹೇಳೋಣಾ ಅಂದರೆ ಸುಮ್ಮನೆ ಪಂಚಾಯ್ತಿ; ಪ್ರಯಾಣದ ಆಯಾಸ– ಹಸಿವು ಬೇರೆ. ಇವನಿಂದ ಬಿಡಿಸಿಕೊಂಡರೆ ಸಾಕು ಎನಿಸಿತು.

“ಹೋಗಲಿ ಹತ್ತು ರೂಪಾಯಿ ತೆಗೆದುಕೋ” ಎಂದೆ

“ಏನು ಧರ್ಮಕ್ಕೆ ಕೊಡ್ತೀರಾ” ಎಂದು ಇನ್ನೊಂದು ಮೊಳೆಯನ್ನು ಕಿತ್ತುವುದರಲ್ಲಿದ್ದ. ನನ್ನ ಚಪ್ಪಲಿಗೆ ಆಗುವ ಚಿತ್ರ ಹಿಂಸೆಯನ್ನು ಸಹಿಸದಾದೆ. ಇಪ್ಪತ್ತು-ಹೊಳೆಯುವ ಮೊಳೆಗಳಿಂದ ಭೂಷಿತವಾದ ನನ್ನ ಚಪ್ಪಲಿ–ಮೊಳೆಗಳನ್ನು ಕಳೆದುಕೊಂಡು–ಹಲ್ಲುಗಳನ್ನು ಕಳೆದುಕೊಂಡ–ಮುದುಕನಂತೆ ಕಾಣುವುದು ಬೇಡ ಎನಿಸಿತು. ಹದಿನೈದು ರೂಪಾಯಿಗಳನ್ನು ಅವನ ಮುಂದೆ-ಕುಕ್ಕಿ ನನ್ನ ಚಪ್ಪಲಿಗಳನ್ನು ಅವನಿಂದ ಕಿತ್ತುಕೊಂಡು ಹಿಂತಿರುಗಿ ನೋಡದೇ ಓಡಿಯೋ ಬಿಟ್ಟೆ.

ಇಂದಿಗೂ–ಮೂಲೆಯಲ್ಲಿ ಬಿಟ್ಟಿರುವ ಆ ಚಪ್ಪಲಿಗಳು–ಥಳ–ಥಳನೆ ಹೊಳೆಯುವ ರಿವಿಟ್ಟುಗಳೊಂದಿಗೆ_ನನ್ನನ್ನು ನೋಡಿ ನಗುತ್ತಿರುವಂತೆ ಭಾಸವಾಗುತ್ತದೆ.

ಒಂದು ಬೇಸಗೆಯ ದಿನ

—ಆನಂದ್

ಕವನ ಸ್ಪರ್ಧೆ ಎಂದರೆ ನನಗೆ
ಹಾಲು ಜೇನಿನಂತೆ !
ಅಟ್ಟದ ಮೇಲೆ ಬಿದ್ದಿವೆ ನನ್ನ
ಕಾವ್ಯಗಳಾ ಹಿರಿ ಕಂತೆ ! ೧

ಮಾರ್ಚಿ ತಿಂಗಳ ಅಪರಂಜೀಲಿ
ಬಂದಿತು ಒಂದಾಹ್ವಾನ
ಓದಿದ ಕೂಡಲೆ ಹೇಳೇ ಬಿಟ್ಟೆ
ನನ್ನದೆ ಬಹುಮಾನ ! ೨

ಬಾಲ್ ಪೆನ್ ಹರಿಯಿತು ಹಾಳೆಯ ಮೇಲೆ
ಹೊಮ್ಮಿತು ಸುಲಲಿತ ಶೈಲಿ
ಸ್ಪರ್ಧೆಯು ಸ್ಫೂರ್ತಿಯು ಶಾರದೆಯಾಗಿ
ನಲಿದಳು ನನ್ನಯ ಕೈಲಿ ! ೩

ಅಂಚೆಯ ಪೆಟ್ಟಿಗೆ ತಲೆಯನು ತಟ್ಟಿ,
ಮರಳಿದೆ ಬೀಗುತಲಿ,
ಹಬ್ಬದ ಭೋಜನ ಪೂರಾ ಮೆದ್ದು
ಮಲಗಿದೆ ಚೇರಿನಲಿ ! ೪

ನೋಡ್ರೀ ನಿಮಗೇ ಫಸ್ಟ್ ಪ್ರೈಸ್ ಬಂತು !
ಮಡದಿಯು ಚೀರಿದಳು
ಧಡಬಡ ಎದ್ದು ಪತ್ರಿಕೆ ಹುಡುಕಲು
ನಸುನಗೆ ಬೀರಿದಳು ! ೫

ಈ ದಿನವಾವುದು ಗೊತ್ತೆ ತಮಗೆ ?
ಕೆಣಕುತ ಕೇಳಿದಳು !
ಮೂರ್ಖರ ದಿನವೆಂದರ್ಥವಾಯಿತು,
ಪ್ರಾಸವ ಮರೆತು. ದೈನ್ಯದಿ ಗೋಣಗಿದೆ...
'ಕನಸೆಂದು ತಿಳಿದಿದ್ದೆ, ತಿಳಿವು ಕನಸಾಗಿತ್ತು !'

ನಾಯಕನ ಸೂತ್ರ

—ಶಿವು

ಅದೊಂದು ಗುಪ್ತ ಸಭೆ. ಭಿನ್ನಮಂತೀಯರೆಲ್ಲಾ ಒಂದು ಗೂಡಿ ತಮ್ಮ ನಾಯಕನ ಮುಂದಾಳತ್ವದಲ್ಲಿ ಅತ್ಯಂತ ಮಹತ್ವದ ವಿಷಯುಗಳನ್ನು ಚರ್ಚಿಸಲು ನೆರೆದಿದ್ದರು. ನಾಯಕ ಮಹಾಶಯರ ಭಾಷಣ ನಿರರ್ಗಳವಾಗಿ ಹೊರ ಹೊಮ್ಮುತ್ತಿತ್ತು. "ಭ್ರಷ್ಟಾಚಾರ" "ವ್ಯಕ್ತಿಪರ ರಾಜಕೀಯ" "ಅಂತರಾತ್ಮನ ದನಿ" ಮುಂತಾದ ಪದಗಳು ಸಭಾಂಗಣದಲ್ಲೆಲ್ಲಾ ಚೆಲ್ಲಾಡಿದ್ದವು. ಭಾಷಣ ಭರದಿಂದ ಸಾಗಿದ್ದಾಗ ಒಮ್ಮೆಲೆ, ನಾಯಕನ ಆಪ್ತನೊಬ್ಬ ಬಹು ತ್ವರೆಯಿಂದ ಓಡಿ ಬಂದು ವೇದಿಕೆಯನ್ನು ಏರಿ ಮೇಲೆ ಬಂದು ನಾಯಕನ ಕಿವಿಯಲ್ಲಿ ಪಿಸುಗುಟ್ಟಿದ:

"ಸ್ವಾಮಿ, ಅನರ್ಥವಾಗೋದರಲ್ಲಿದೆ. ಅಧಿಕಾರ ಮದದಿಂದ ಹುಚ್ಚೆದ್ದು ಕುಣಿಯುತ್ತಿರುವ ನಮ್ಮ ಮೂಲ ಪಕ್ಷದವನೊಬ್ಬ ಈ ಸಭೆಯಲ್ಲಿ ಗುಪ್ತವಾಗಿ ಸೇರಿದ್ದಾನಂತೆ. ಅವನೊಡನೆ ಒಂದು ಕಿಸೆ ಟೇಪ್ ರೆಕಾರ್ಡರ್ ಸಹಾ ಇದೆಯಂತೆ. ಇಲ್ಲಿನ ರಹಸ್ಯ ವಿದ್ಯಮಾನಗಳೆಲ್ಲವೂ ಸಂಪೂರ್ಣವಾಗಿ ರಟ್ಟಾಗುವ ಅಪಾಯವಿದೆ. ಆ ಗುಪ್ತಚಾರನನ್ನ ಈಗಲೇ ಗುರುತಿಸಬೇಕು. ಆದರೆ ಈ ದೊಡ್ಡ ಗುಂಪಿನಲ್ಲಿ ಹೇಗೆ ಹುಡುಕುವುದೆಂದು ತಿಳಿಯುತ್ತಿಲ್ಲ" ಆಪ್ತನ ದನಿಯಲ್ಲಿ ಆತಂಕ, ಭಯ ಎದ್ದು ಕಾಣುತ್ತಿತ್ತು.

ನಾಯಕ ಕಂಗೆಡಲಿಲ್ಲ. ಧೃತಿಗೆಡಲಿಲ್ಲ. ತನ್ನ ಭಾಷಣ ಮುಂದುವರಿಸಿದ. "ಮಿತ್ರರೇ, ನಮ್ಮ ಈ ಸಭೆಯಲ್ಲಿ ಅಧಿಕಾರ ಮದವೇರಿರುವ ವರ್ಗದ ಕುನ್ನಿಯೊಂದು ಸೇರಿಕೊಂಡಿದೆ. ನಾಲ್ಕನೆಯ ಸಾಲಿನಲ್ಲಿರುವ, ಐದನೇ ಆಸಾಮಿಯೇ ಆ ನಾಯಿ. ಎಲ್ಲ ಸೇರಿ ಅವನಲ್ಲಿರುವ ಟೇಪ್ ರೆಕಾರ್ಡರ್ ಕಸಿದುಕೊಂಡು ಅವನನ್ನ ಒದ್ದು ಹೊರಗೆ ಹಾಕಿ"

ಗುಪ್ತಚಾರನನ್ನ ಎಲ್ಲ ಸುತ್ತುಗಟ್ಟಿದರು. ಅವನ ಜೇಲದಲ್ಲಿ ಒಂದು ಪುಟ್ಟ ಟೇಪ್ ರೆಕಾರ್ಡರ್ ತಿರುಗುತ್ತಿತ್ತು. ನಾಯಕನ ಆಣತಿಯಂತೆ ಅದನ್ನು ಕಿತ್ತುಕೊಂಡು, ಅವನಿಗೆ ನಾಲ್ಕು ತದುಕಿ ಹೊರಗಟ್ಟಿದರು.

ನಾಯಕನ ಆಪ್ತನಿಗಂತೂ ಅತೀವ ಸಂತೋಷ. ಬಹು ಮೆಚ್ಚುಗೆಯ ದನಿಯಿಂದ ನಾಯಕನನ್ನು ಕೇಳಿದ.

"ಮಹಾ ಸ್ವಾಮಿ, ಬುದ್ಧಿ ಅಂದರೆ ನಿಮ್ಮದು. ಅಲ್ಲಾ ಈ ದೊಡ್ಡ ಸಭೆಯಲ್ಲಿ, ಒಂದೇ ಕ್ಷಣದಲ್ಲಿ ಆ ದುರುಳನನ್ನು ಗುರುತಿಸಿದರಲ್ಲಾ, ಎಂತಹ ಮಹಾನ್ ಶಕ್ತಿ ನಿಮ್ಮದು ! ಅಷ್ಟು ಸುಲಭವಾಗಿ ಗುರುತಿಸಿದ್ದಾದರೂ ಹೇಗೆ ತಿಳಿಸ್ತೀರಾ?"

ನಾಯಕ ಹೆಮ್ಮೆಯ ಮೆಲುನಗೆ ಬೀರುತ್ತಾ ನುಡಿದ.

"ಅಯ್ಯೋ ಪೆಚ್ಚೇ, ಅಷ್ಟೂ ತಿಳಿಯದೇ ನಿನಗೆ. ನಮ್ಮ ಹಿರಿಯ ನಾಯಕರು ನಮಗೆಲ್ಲಾ ಮೊದಲಿನಿಂದಲೇ ಒಂದು ಮುಖ್ಯ ಸೂತ್ರಾನ ಅರೆದು ಕುಡಿಸಿದ್ದರು. ಅದರಿಂದಲೇ ಆ ಪ್ರಾಣೀನ ಗುರುತಿಸೋದು ಅಷ್ಟು ಸುಲಭ ಆಯ್ತು."

"ಏನದು ಸಾರ್, ಆ ಸೂತ್ರ? ನಮಗೂ ತಿಳಿಸಿ" ಆಪ್ತ ಕುತೂಹಲದಿಂದ ಕೇಳಿದ.

ನಾಯಕ ಉವಾಚ

"ಪ್ರಗತಿಪರ ಶಕ್ತಿಗಳ ವಿರೋಧಿಗಳು ಸದಾ ಎಚ್ಚರವಾಗಿರುತ್ತಾರೆ !"

"ಸೀತದ ಗಡ್ಡೆ ಆಪರೇಷನ್ ಮಾಡಿಸಿಕೊಂಡರೆ ಧ್ವನಿ ಕೆಟ್ಟು ಹೋಗುತ್ತ್ಯೇ ಡಾಕ್ಟರೇ" ಎಂದು ಸಂಗೀತ ಕಲಿಯುತ್ತಿದ್ದ ಯುವತಿ ಕೇಳಿದಳು.

"ಧ್ವನಿ ಕೆಡುಲ್ಲಮ್ಮಾ, ನೀವು ಬಾರಿಸೋ ಹಾರ್ಮೊನಿಯಂ ಜತೆಗೆ ದಿವನಾಗಿ ಹೊಂದಿಕೊಳ್ಳುತ್ತೆ" ಎಂದು ಪಕ್ಕದ ಮನೆ ಡಾಕ್ಟರು ಹೇಳಿದರಂತೆ.



ದಿನ ಬೆಳಗಾದರೆ ಕೊಲೆ–ಕೊಲೆ–ಕೊಲೆ !
ಇಷ್ಟಿದ್ರೂ ಜನಸಂಖ್ಯೆ ಯಾಕ್ರಿ ಏರ್ತಾ ಇದೆ ?

ಒಂದು ನವ್ಯ ಕಥೆ

—ಆನಂದ್

ಮೊನ್ನೆ ಹಾಸನಕ್ಕೆ ಹೋಗಿದ್ದೆ. ನಾವೆಲ್ಲ ಚಿಕ್ಕ ಹುಡುಗರಾಗಿದ್ದಾಗ ಆಡಿ, ಓಡಿ ಸಂತಸಪಟ್ಟ ಊರು ಅದು. ಈಗ ಬಹಳ ಬದಲಾವಣೆ ಆಗಿಬಿಟ್ಟಿದೆ ಅನ್ನಿ. ಹಾಸನದಲ್ಲಿ ನನ್ನ ಚಿಕ್ಕಪ್ಪ ಇದಾರೆ. ಅವರ ಮನೇಲೇ ನನ್ನ ಠಿಕಾಣಿ. ಅವರ ಮೊಮ್ಮಕ್ಕಳು ಇಬ್ಬರು ನನ್ನ ಹಿಡಿದರು—ಕಥ ಹೇಳಿ ಮಾಮ ಅಂತ. ಸರಿ ಅಂತ ರಾತ್ರಿ ಊಟ ಆದ ಮೇಲೆ ಅವನ್ನೂ ಹತ್ರ ಕೂರಿಸ್ಕೊಂಡು ಶುರು ಮಾಡಿದೆ—

ಹಿಂದಿನ ಕಾಲದಲ್ಲಿ ಭರತಪುರ ಅಂತ ಒಂದೂರಿತ್ತು. 'ಹ್ಞೂ ಅದಕ್ಕೆ ಒಬ್ಬ ರಾಜ. 'ಹ್ಞೂ ನಂಗೆ ರೇಗ್ತು. ನೋಡ್ರೋ, ಯಕ್ಷಗಾನದ ತರಹ ಹ್ಞೂ ಗುಟ್ಟಬೇಡಿ. ನಾನು ಹೇಳಿದ್ದನ್ನ ನೀವು ಕೇಳ್ತಿದೀರ ಅಂತ ನಂಗೆ ಗೊತ್ತು. ನಿಮಗೆ ನಿದ್ದೆ ಬಂದಾಗ ನಾನೇ ನಿಲ್ಲಿಸ್ತೀನಿ ಕತೇನ ಅಂದೆ. 'ಹ್ಞೂ ಅಂದ್ರು !

ಆ ರಾಜನ ಆಸ್ಥಾನದಲ್ಲಿ ಬೇಕಾದಷ್ಟು ಜನ ಅವನಿಗೆ ಸಹಾಯ ಮಾಡುಕ್ಕೆ. ಬೇರೆ ಊರಿಂದ ಜನ ಯಾರಾರೂ ಬಂದು ತೊಂದ್ರೆ ಕೊಡ್ತಾರೇನೋ ಅಂತ ನೋಡುಕ್ಕೇ ಸ್ಪೆಷಲ್ ಜನ ಇದ್ರು. ರಾಜನ ಮಂತ್ರಿಗಳೆಲ್ಲ ಅವನ್ನ ಮೊಗಳೀ ಹೊಗಳೀ ತಾವೂ ಸಂತೋಷವಾಗಿದ್ರು. ಅವರು ಹೊಗಳಿದ್ದಕ್ಕೆ ಅವ ರಿಗೆ ಆಗಾಗ ಸಂಭಾವನೇನೂ ಸಿಕ್ತಿತ್ತು. ಒಂದು ಸಲ ರಾಜನಿಗೆ ಯೋಚನೆ ಬಂತು· ಹೊರ ದೇಶದೋರು ಯಾರಾದ್ರೂ ಧಾಳಿ ಮಾಡುಕ್ಕೆ ಬಂದರೆ ನಂ ಹತ್ರ ಬಿಲ್ಲು ಬಾಣ, ಕತ್ತಿ ಗುರಾಣಿ ಎಲ್ಲ ಸಾಕಾಗೋ ಅಷ್ಟು ಇದೆಯೋ ಅಂತ ! ಸರಿ ಅವನ ಸೇನಾಧಿಪತೀನ ಕರೆಸಿದ. ಇನ್ನೂ ಒಂದಿಷ್ಟು ಆಯುಧಗಳನ್ನ ಕೊಂಡು ಕೊಳ್ಳೋದು ಒಳ್ಳೇದು ಅಂತ ಅಭಿಪ್ರಾಯ ಪಟ್ರು ಎಲ್ಲ. ಸರೀ ಈಗ ಇವನ್ನೆಲ್ಲ ಎಲ್ಲಿಂದ ತರ್ಸೋದು ? ಉತ್ತರ ದೇಶದಲ್ಲಿ ಸ್ವೀದನಪುರ ಅಂತ ಊರೊಂದಿದೆ. ಅಲ್ಲಿ ಬಹಳ ಚೆನ್ನಾದ ಆಯುಧಗಳನ್ನ ಮಾಡ್ತಾರೆ, ಅಲ್ಲಿಂದಾನೇ ತರಿಸೋಣ ಅಂತ ನಿರ್ಧಾರ ಮಾಡಿದರು. ರಾಜನ ಆಪ್ತರು ಕೆಲವರು ಇನ್ನೂ ಒಂದೆರಡು

ಕಡೆ ವಿಚಾರಿಸೋಣ ಅಂದರು. ಅಷ್ಟರಲ್ಲಿ ರಾಜನ ಬಳಗದವನೊಬ್ಬ (ಸ್ವೇದನ ಪುರದ ಹತ್ರ ಊರಲ್ಲಿ ಇದ್ದೋನು) ಒಂದುಪಾಯ ಮಾಡಿದ. ಭರತಪುರಕ್ಕೆ ಬಂದು ರಾಜನಿಗೆ ಹೇಳಿದ: ನೀವು ಸ್ವೇದನಪ್ರರದ ಆಯುಧಾನೇ ಕೊಂಡುಕೊಳ್ಳಿ! ಅವರು ನಿಂ ಹತ್ರಾನೇ ವ್ಯಾಪಾರ ಮಾಡಿದ್ದಕ್ಕೆ ನಾನು ನಿಮಗೆ ಮೂವತ್ತು ಲಕ್ಷ ವರಹ ಸಂಭಾವನೆ ಕೊಡಿಸ್ತೀನಿ ಅಂದ. ಆ ಸಂಭಾವನೇಲಿ ಸ್ವಲ್ಪ ಭಾಗ ತನ್ನ ಜೇಬು ಸೇರುತ್ತೆ ಅಂತ ಹೇಳಲಿಲ್ಲ ! ರಾಜನಿಗೆ ಯೋಚನೆ ಆಯ್ತು. ಈ ಗುಟ್ಟು ಜನರಿಗೆ ಗೊತ್ತಾದ್ರೆ ಊರಲ್ಲೆಲ್ಲ ಗುಲ್ಲು ಆಗುತ್ತೇನೋ ಅಂತ! ಆದರೆ ದುಡ್ಡಿನ ಆಸೆ ರಾಜನ್ನೂ ಬಿಡಲಿಲ್ಲ.

ರಾಜ ಸರೀ ಅಂದ. ವ್ಯಾಪಾರ ಕುದುರಿತು. ಆಯುಧ ಎಲ್ಲ ಭರತ ಪುರಕ್ಕೆ ಬಂತು. ಸೈನಿಕರೆಲ್ಲ ಗೊಣಗಾಡುಕ್ಕೆ ಶುರು. ಅಯ್ಯೋ ಈ ಕತ್ತಿಗಳು ಹರಿತವಾಗೇ ಇಲ್ಲ. ಭಾರ ಮಾತ್ರ ಜಾಸ್ತಿ ! ಈ ಗುರಾಣಿಗಳನ್ನ ನನ್ನ ನಾಲ್ಕು ವರ್ಷದ ಮಗಾನೂ ಒಂದೇ ಕೈಲಿ ಎತ್ತಿ ಬಿಸಾಡ್ತಾನೆ ! ಈ ಬಾಣಗಳು ಕುರೀ ಚರ್ಮಕ್ಕೂ ಭೇದಿಸುಲ್ಲ ! ಇತ್ಯಾದಿ. ಸೇನಾಧಿಪತೀಗೆ ಕೋಪ ಬಂತು. ದೂರು ಕೊಟ್ಟ ಸೈನಿಕರನ್ನೆಲ್ಲ ಗಡಿನಾಡಿಗೆ ವರ್ಗ ಮಾಡಿದ! ಗೊಣಗಾಟ ನಿಲ್ತು. ಆದರೆ ಕೆಲವು ಜನರಿಗೆ ಈ ಗುಟ್ಟಿನ ವ್ಯಾಪಾರದ ಸುಳಿವು ಗೊತ್ತಾಯ್ತು. ಅವರೆಲ್ಲ ಕೂಗಾಡುಕ್ಕೆ ಶುರು ಮಾಡಿದರು. ನಾವೇ ಸ್ವೇದನಪುರಕ್ಕೆ ಹೋಗ್ತೀವಿ ! ನಿಜ ವೇನು ಅಂತ ಕಂಡುಹಿಡೀತೀವಿ ಅಂತ ಎಗರಾಡುಕ್ಕೆ ಶುರು ಮಾಡಿದರು. ರಾಜ ಊರಲ್ಲೆಲ್ಲ ಡಂಗೂರ ಹೊಡೆಸ್ದ! ರಾಜ ಆಗ್ಲೀ, ರಾಣೀ ಆಗ್ಲಿ, ರಾಜಕುಮಾರ ರಾಜ ಕುಮಾರೀ ಆಗ್ಲಿ, ಸ್ವೇದನಪುರದ ರಾಜನಿಂದ ಯಾವ ಸಂಭಾವನೇನೂ ಪಡೆ ದಿಲ್ಲ !" ಅಂತ.

ಜನರ ಗಲಾಟೆ ಕಮ್ಮಿ ಆಗ್ಲಿಲ್ಲ ! ಸರಿ ಅಂತ ರಾಜ ಆಸ್ಥಾನದ ಕೆಲವರ್ನ ಸೇರಿಸಿ ಒಂದು ಸಮಿತಿ ಮಾಡಿದ. ಅವರೆಲ್ಲ ಸೇರಿ, ಚರ್ಚೆ, ನಾಟಕ ಹೂಡಿ, ರಾಜಂದು ಏನೂ ತಪ್ಪಿಲ್ಲ ! ಸ್ವೇದನಪುರದ ಆಯುಧಾನೇ ಜಗತ್ತಿನಲ್ಲಿ ಶ್ರೇಷ್ಠ ಅಂತ ಪ್ರಚಾರ ಮಾಡಿದರು. ಹಾಗೇ ಜನಕ್ಕೆ ಈ ಗಲಾಟೆ ಎಲ್ಲ ಮರೆತು ಹೋಯ್ತು!

ಕತೆ ಹೇಗೆ ಮುಗಿಸೋದು ಅಂತ ಗೊತ್ತಾಗಲಿಲ್ಲ ನಂಗೆ. ರಾಜೀನ ಕೇಳಿದೆ–ನೀನೇ ಹೇಳು ಮುಂದೆ ಏನಾಗತ್ತೆ ಅಂತ ಅಂದೆ. ಅವಳು ಹೇಳಿದ್ದು—ಭರತಪುರದ ಉತ್ತರಕ್ಕಿರೋ ದೇಶದ ರಾಜರಿಗೆ ಈ ಸುದ್ದಿ ಗೊತ್ತಾಗತ್ತೆ. ಅವನು ಸೈನ್ಯ ಎಲ್ಲ ಕೂಡಿಸ್ಕೊಂಡು ದಂಡಯಾತ್ರೇಗೆ ಬರ್ತಾನೆ. ದೊಡ್ಡ ಯುದ್ಧ ಆಗಿ ಭರತಪುರದ ರಾಜ ಸೋಲ್ತಾನೆ ! ಭರತಪುರ ಹೊರ ದೇಶಕ್ಕೇ ಸೇರಿ ಹೋಗತ್ತೆ ! ರಾಜಿ ಹೇಳಿದ್ದು ಕೇಳಿ ಭಯ ಆಯ್ತು. ಸರಿ ಲೇಟಾಯ್ತು ನಿದ್ದೆ ಮಾಡಿ ಅಂತ ಹೇಳಿ ಅವರ್‍ನ ಕಳಿಸ್ದೆ. ಯಾಕೋ ನಂಗೆ ಅವತ್ತು ರಾತ್ರಿ ನಿದ್ದೇನೇ ಬರ್‍ಲಿಲ್ಲ ! !

O O O O



“ನನ್ಗೇನೋ ದೇವರ ಮೇಲೇ ಅನುಮಾನ ! ಬೀಗ ಹಾಕಿದ್ರೂ ಒಳಗಿದ್ದೋನು ಅವನೊಬ್ನೇ ಅಲ್ವೇ !”

ನಾನು ಮತ್ತು ಯೌವನ

—ಬಿ. ಸಿ.

ಒಬ್ಬ ವ್ಯಕ್ತಿಯ ವಯಸ್ಸು ಅವನ ಭಾವನೆಗಳಿಗೆ ಅನುಗುಣವಾಗಿರುತ್ತದೆಯೇ ಹೊರತು ಅವನ ದೈಹಿಕ ವಯಸ್ಸಿಗಲ್ಲ. ಅದನಿಗೆ ಅರವತ್ತು ವರ್ಷಗಳಾಗಿದ್ದರೂ ಅವನ ಅಂತರಂಗದಲ್ಲಿ ಯೌವನದ ಹುರುಪಿದ್ದರೆ ಅವನು ತತ್ತ್ವತಃ ಯುವಕನೆ. ಹೀಗಂತ ಹಳೆಯ ಲೋಕೋಕ್ತಿಯೇ ಹೇಳುತ್ತೆ. ಅದಕ್ಕಿಂತಲೂ ಮುಖ್ಯವಾಗಿ ಹಾಗಂತ ದೇವಾನಂದ್ ಅಪ್ಪಣೆ ಕೊಡಿಸಿದಾರೆ. ದೇವಾನಂದ್ ನಿಮಗೆ ಗೊತ್ತಲ್ಲ ? ಅವರ ಹೆಸರಾದರೂ ಕೇಳಿರುತ್ತೀರಲ್ಲ. ಆತ ಒಬ್ಬ ಮುಂಚೂಣಿ ಸಿನಿಮಾ ನಟ ಅಂತ. ಈಗಲ್ಲ, ಸ್ವಲ್ಪ ವರ್ಷಗಳ ಹಿಂದೆ. ಈಗಿನ ಕಾಲದಲ್ಲಿ ಸಿನಿಮಾ ನಟರೇ ಸಮಾಜದಲ್ಲಿ, ರಾಜಕೀಯದಲ್ಲಿ ಪರ್ಯಾಲೋಚನೆಯನ್ನ ರೂಪಿಸೋರಾದ್ದರಿಂದ ದೇವಾನಂದ್ ಹೇಳಿದ್ದೇ ಪರಮ ಸತ್ಯ ಇರಬೇಕು. ಏಕೆಂದರೆ ಆತ ಸಿನಿಮಾ ನಟ.

ನನಗೆ ರಿಟೈರ್ ಆಗಿದೆ. ನಿಜ, ಆದರೆ ನನಗೆ ಏನೂ ವಯಸ್ಸಾಗಿಲ್ಲ ಅಂತ ನನ್ನ ಭಾವನೆ. ಕೈ ಕಾಲು ಗಟ್ಟಿಯಾಗಿರುವಾಗಲೇ, ಬುದ್ಧಿ ನೆಟ್ಟಗಿರುವಾಗಲೇ, ನನ್ನನ್ನ ಅನ್ಯಾಯವಾಗಿ ನಿವೃತ್ತಿ ಮಾಡಿದರು ಅಂತ ಸರ್ಕಾರದ ಮೇಲೆ ನನ್ನ ಗೊಣಗು. ಏನೋ ರೂಲ್ಸ್ ಅಂತೆ, ಮಣ್ಣಂತೆ, ಮಸಿಯಂತೆ. ಎಲ್ಲರಿಗೂ ಅನ್ವಯವಾಗೋ ಒಂದು ರೂಲ್‌ನ ಲವಲವಿಕೆಯಾಗಿರೋ ಒಬ್ಬ ವ್ಯಕ್ತಿಯ ವಿಷಯದಲ್ಲಿ ವಿನಾಯಿತಿಸದೆ ಇದ್ದರೆ ಅನ್ಯಾಯವಲ್ಲವೆ ? ಆಯಿತು, ಬಿಡಿ. ನಾನು ಕೆಲಸಕ್ಕೆ ಬಾರದೋನು ಅನ್ನೋ ಹಾಗೆ ನಿವೃತ್ತಿ ಮಾಡಿಸಿದರು. ಫಲವಿಲ್ಲದಿದ್ದರೂ ಅದನ್ನೇ ಚಿಂತಿಸುತ್ತಾ ಇದೀನಿ. ನನ್ನ ದೇಹ ಶಿಥಿಲವಾಗಿಲ್ಲ ಅನ್ನಿಸುತ್ತೆ. ಮನಸ್ಸು ಸಾಟಿಯಾಗಿದೆ ಅನ್ನೋದು ಖಾತರಿ. ಇದೆಲ್ಲ ಆ ಅವ್ಯಕ್ತ ಸರಕಾರಕ್ಕೇನು ಗೊತ್ತು ? ಯಾರಿಗೆ ತಾನೆ ಏನು ಗೊತ್ತು ? ಕೂದಲು ತುಸು ನರೆ ಬಂದಿದೆ; ಚರ್ಮ ಎಲ್ಲೋ ಅಲ್ಲಲ್ಲಿ ಒಂದಿಷ್ಟು ಸುಕ್ಕು ಬಿದ್ದಿದೆ, ನಿಜ. ಈ ಬಾಹ್ಯ ಚಿಹ್ನೆಗಳನ್ನೇ ಗಮನಿಸಿ ಇತರರು ನಾನು ಮುದುಕ ಅನ್ನೋ ರೀತಿ ನಡೆದುಕೊಳ್ಳುತ್ತಾರೆ. ಆದರೆ ಸತ್ಯ ನನಗೆ ಗೊತ್ತು. ನಾನು ಇನ್ನೂ ಯುವಕ; ಯಾಕೆಂದರೆ ನನ್ನ ಅಂತರಂಗ ಹಾಗೆ ಹೇಳುತ್ತೆ.

ಯಯಾತಿ ತಾನು ಮುದುಕ ಅಂದುಕೊಂಡ. ಅಲ್ಲೇ ಅವನು ತಪ್ಪು ಮಾಡಿದ್ದು. ಯೌವನದ ಸುಖ ಇನ್ನೂ ಅನುಭವಿಸಬೇಕು ಅಂತ ಹಾತೊರೀತಿದ್ದ ಅವನು 'ನನ್ನ ರಾಜ್ಯವನ್ನ ನಿನಗೆ, ನಿನ್ನ ಮಕ್ಕಳಿಗೆ ಕೊಟ್ಟುಬಿಡುತೀನಿ' ಅಂತ ಯಾವ ಯುವತಿಗೆ ಹೇಳಿದರೂ ನಡೀತಿತ್ತು. ವಯಸ್ಸು ಬದಲಾಯಿಸಿಕೊಳ್ಳಿ ಅಂತ ಮಕ್ಕಳನ್ನ ಕೇಳಬೇಕಾಗೇ ಇರಲಿಲ್ಲ. ಯಯಾತಿಗಿಂತ ಶಂತನು ಹೆಚ್ಚು ಬುದ್ಧಿವಂತ. ನಡು ವಯಸ್ಸು ಮೀರಿದ್ದರೂ, ವಯಸ್ಸಿಗೆ ಬಂದ ಮಗ ಇದ್ದರೂ ತನಗೆ ಬೇಕಾಗಿದ್ದ ಬೆಸ್ತರ ಹುಡುಗೀನ ಅರಮನೆಗೆ ಕರೆದುಕೊಂಡು ಹೋಗಲಿಲ್ಲವೆ ? ಮುಂದೆ ಕೌರವರು, ಪಾಂಡವರು, ಕುರುಕ್ಷೇತ್ರ ಅಂತ ಏನೇನೋ ಆಯಿತು, ಬಿಡಿ ಅದು ಬೇರೆ ಮಾತು. ತಾನು ಯೌವನಸ್ಥ ಅಂದುಕೊಂಡಿದ್ದರಿಂದ ಶಂತನು ಇದ್ದಷ್ಟು ಕಾಲ ಖುಷಿಯಾಗಿದ್ದ. ಇದೇ ವಿಷಯವನ್ನು ನನ್ನ ಮಗನ ಜೊತೆ ಪ್ರಸ್ತಾಪ ಮಾಡಿದಾಗ ಅವನು, 'ಎಷ್ಟಾದರೂ ಶಂತನು ಯಯಾತಿಗಿಂತಲೂ ಈಚಿನೋನು' ಅಂದ, ಆಧುನಿಕತೇಲಿ ಏನೋ ಉತ್ಕೃಷ್ಟತೆ ಇದೆ ಅನ್ನೋ ಅರ್ಥದಲ್ಲಿ.

ಇದೆಲ್ಲ ಯಾಕೆ ಹೇಳಿದೆ ಅಂದರೆ, ನಾನು ಮುದುಕ ಅನ್ನೋ ತರಹ ಯಾರಾದರೂ ವರ್ತಿಸಿದರೆ ಇರಿಸುಮುರಿಸಾಗುತ್ತೆ. ಕೆಲವು ಸಲ ಕೋಪ ಬರುತ್ತೆ. ಎಲ್ಲರಿಗೂ ಹಾಗೇ ಆಗುತ್ತೆ ಅನ್ನಿ. ಆದರೆ ಈ ಅಸಮಾಧಾನ, ಕೋಪ, ತೋರಿಸಿಕೊಳ್ಳೋಕ್ಕಾಗೋಲ್ಲ. ಕಾಲು ಕೆರೆದುಕೊಂಡು ಜಗಳಕ್ಕೆ ನಿಲ್ಲೋ ಹಾಗಿಲ್ಲ. ಸಂಸ್ಕೃತಿ ಅನ್ನೋದೊಂದಿದೆಯಲ್ಲ. ಅಲ್ಲದೆ 'ನಾನೇನು ಮುದುಕನೇನಯ್ಯ ?' ಅಂತ ಜಗಳಕ್ಕೆ ನಿಂತರೆ ನಗೆಪಾಟಲಾಗಬಹುದು ಅನ್ನೋ ಹೆದರಿಕೆ ಇರುತ್ತಲ್ಲ. ಆದ್ದರಿಂದ ನಾನು ಮುದುಕ ಅಂತ ಯಾರೇ ಹೇಗೇ ವರ್ತಿಸಿದರೂ ಸೌಜನ್ಯದಿಂದ ತಡೆದುಕೊಂಡಿರುತೀನಿ.

ಅವತ್ತು ರಸ್ತೇಲಿ ನಡೆದುಕೊಂಡು ಹೋಗುತ್ತಿದ್ದೆ. ಮಕ್ಕಳು ಟೆನ್ನಿಸ್ ಬಾಲ್ ಕ್ರಿಕೆಟ್ ಆಡುತ್ತಿದ್ದರು. ನಾನು ಸಮೀಪವಾದಾಗ ಅವರಲ್ಲೊಬ್ಬ ಬೌಲ್ ಮಾಡೋನಿಗೆ, 'ತಡೆಯೋ, ತಾತ ಹೊರಟು ಹೋಗಲಿ' ಅಂದ. ಇನ್ನೊಂದು ದಿನ ಬಿ.ಟಿ.ಎಸ್ ಬಸ್ಸಿನಲ್ಲಿ ನಿಂತುಕೊಂಡೇ ಪ್ರಯಾಣ ಮಾಡುತ್ತಿದ್ದಾಗ ಅಧಿಕ ಪ್ರಸಂಗಿ ಕಂಡಕ್ಟರು, 'ಯಜಮಾನರು ಕೂತುಕೊಳ್ಳಲಿ, ಯಾರಾರೂ ಜಾಗ ಕೊಡಿ' ಅಂದ. ಎಲ್ಲರೆದುರಿಗೂ ಕನಿಕರ ತೋರಿಸಿ ಮಾನ ಕಳೀತಿದಾನಲ್ಲ ಅನ್ನಿಸಿತು. ನನ್ನ ಅದೃಷ್ಟ ಚೆನ್ನಾಗಿತ್ತು ಅನ್ನಿ, ಯಾರೂ ಏಳಲಿಲ್ಲ. ಬಸ್ಸಿನಿಂದ ಇಳಿಯೋ ಹೊತ್ತಿಗೆ ಮೇಲಕ್ಕೆತ್ತಿದ್ದ ಕೈ, ಕೆಳಗೆ ಊರಿದ್ದ ಕಾಲು, ಎರಡೂ ನೋಯುತ್ತಿದ್ದರೂ ನನ್ನ ಮಾನ ಬಚಾವಾಯಿತು ಅನ್ನೋ ಸಮಾಧಾನವಿತ್ತು.

ನನ್ನ ಸೋದರ ಸೊಸೆ ಬಿ.ಎ. ಓದುತ್ತಿದ್ದಾಳೆ. ಹಾಗಲ್ಲ, ಹೀಗೆ ಅಂತ ಏನಾದರೂ ಹೇಳೋದಕ್ಕೆ ಹೊರಟರೆ. 'ನೀವು ಸುಮ್ಮನಿರಿ, ಮಾವಯ್ಯ, ನಿಮಗೆ ಗೊತ್ತಿಲ್ಲ, ನೀವು ಹಿಂದಿನ ಕಾಲದೋರು' ಅನ್ನುತ್ತಾಳೆ. ಮೊನ್ನೆ ಡಿಸೆಂಬರ್‌ನಲ್ಲಿ ಕೊರೆಯೋ ಚಳಿ ಶುರುವಾದಾಗ ನನ್ನ ಹಿರೀ ಸೊಸೆ ಒಂದು ಮಂಕಿ ಕ್ಯಾಪ್ ಕೊಂಡು ತಂದು 'ಇದನ್ನ ಹಾಕಿಕೊಳ್ಳಿ, ಯಾವಾಗಲೂ ಶಾಲು ಹೊದ್ದುಕೊಂಡಿರಿ. ಈ ವಯಸ್ಸಿನಲ್ಲಿ ಆರೋಗ್ಯ ತುಂಬ ಸೂಕ್ಷ್ಮವಾಗಿರುತ್ತೆ' ಅಂತ ಸದುದ್ದೇಶದ ಬುದ್ಧಿವಾದ ಹೇಳಿದಳು. ಈಗ ನೀವೇ ಹೇಳಿ. ಆ ಕ್ರೀಡಾಸಕ್ತ ಮಕ್ಕಳು, ಆ ಕಾರ್ಯನಿರತ ಕಂಡಕ್ಟರು, ನನ್ನ ಸೋದರ ಸೊಸೆ, ನನ್ನ ಸೊಸೆ, ಅವರುಗಳನ್ನ ಆಕ್ಷೇಪಿಸೋಕ್ಕಾಗುತ್ತಿತ್ತೆ ? ತಡಕೊಂಡಿರಬೇಕಾಗುತ್ತೆ.

ಆದರೆ ನನ್ನಂಥೋನಿಗೂ ಒಂದು ಕಾಲ ಬರುತ್ತೆ, ಇನ್ನೊಬ್ಬನ್ನ ಅವನ ಜಾಗದಲ್ಲಿ ಮಡಗಿರೋದಕ್ಕೆ. ನನ್ನ ಹಲ್ಲುಗಳು ನನ್ನೋವೆ. ಎರಡೋ, ಮೂರೋ ದವಡೆ ಹಲ್ಲು ಬಿಟ್ಟರೆ ಯಾವುದನ್ನೂ ಕೀಳಿಸಿಲ್ಲ. ಮೊನ್ನೆ ಪ್ಲಾಟ್‌ಫಾರ್ಮ್‌ನಲ್ಲಿ ರೈಲಿಗೆ ಕಾಯುತ್ತಾ ನಿಂತಿದ್ದೆ. ಹಲ್ಲೆಲ್ಲ ಬಿದ್ದುಹೋಗಿದ್ದ ಒಬ್ಬ ಮುದುಕ ಸ್ವಲ್ಪ ಹೊತ್ತು ಕುತೂಹಲದಿಂದ ನನ್ನನ್ನೇ ನೋಡುತ್ತಿದ್ದೋನು, ಇದ್ದಕ್ಕಿದ್ದ ಹಾಗೇ, ಯಾವ ತರಹದ ಪೀಠಿಕೇನೂ ಇಲ್ಲದೆ, 'ಹಲ್ಲು ಕಟ್ಟಿಸಿಕೊಂಡು ಎಷ್ಟು ದಿನ ಆಯಿತು ?' ಅಂತ ಕೇಳಿದ. ನನಗೆ ಕೋಪ ಬರಲಿಲ್ಲ. ಇರಿಸು ಮುರಿಸಾಗಲಿಲ್ಲ. ಒಂದು ತರಹ ಸಂತೋಷ ಒಳಗೊಳಗೇ ಬುಗ್ಗೆ ಏಳೋದಕ್ಕೆ ಶುರುವಾಯಿತು. 'ಸಮಯ ಸಿಕ್ಕಿತು, ತೋರಿಸುತೀನಿ ಇವನಿಗೆ !' ಅಂದುಕೊಂಡೆ. ಹಲ್ಲೆಲ್ಲ ಕಾಣೋ ಹಾಗೆ ಕಿವಿಯಿಂದ ಕಿವಿಯವರೆಗೆ ತುಟಿ ಬಿರುಕಿಸಿ, ಇದು ಕಟ್ಟಿಸಿದ ಹಲ್ಲಲ್ಲ ಅಂತ ಜಂಭದಿಂದ ಹೇಳಿದೆ. ನಿನಗಿಂತ ನಾನೇ ಎಷ್ಟೋ ಮೇಲು ಕಣಯ್ಯ ಅಂತ ಮನಸ್ಸಿನಲ್ಲೇ ಅಂದುಕೊಂಡೆ. ಎಷ್ಟಾದರೂ ಯೌವನ, ಮುಪ್ಪು ಎಲ್ಲ ಸಾಪೇಕ್ಷ ವಿಷಯಗಳಲ್ಲವೆ ? ನನ್ನನ್ನ ನೀವು ಮುದುಕ ಅಂದರೆ, ನನಗಿಂತಲೂ ಮುದುಕನಾದೋನು ಒಬ್ಬ ಇದ್ದೇ ಇರುತ್ತಾನಲ್ಲ. ಈ ದೃಷ್ಟಿಯಲ್ಲೂ ನಾನು ಯೌವನಸ್ಥನೇ. ಕಡೇ ಪಕ್ಷ ಹೋಲಿಕೆಯಿಂದಾದರೂ ಇದು ಸತ್ಯ.

ಮರೆವು ಅಂದ್ರೆ ನಮ್ಮ ಅರವಾಮುದ್ದೂನ ಬಿಟ್ರೆ ಇಲ್ಲ ತೌರಿನಿಂದ ಹಿಂತಿರುಗುತ್ತಿದ್ದ ಹೆಂಡ್ತೀನ ಕರೆತರುಕ್ಕೆ ರೈಲ್ವೇ ನಿಲ್ದಾಣಕ್ಕೆ ಹೋದೋನು, ಆಕೆ ಇಳಿದ ಮೇಲೆ ತಾನೇ ಮರೆತು ರೈಲು ಹತ್ತಿ ಹೊರಟೇ ಬಿಟ್ಟ.

ಕೊರವಂಜಿಯಿಂದ......



ದಫೇದಾರ್ ದೇರಣ್ಣೋರು

—ದಾಶರಥಿ ದೀಕ್ಷಿತ್

ಪಕೋಡದಯ್ಯಾ—

"ಲೋ! ಫಕೀರ—ಮುದ್ದಯ್ಯ—ಲಿಂಗಪ್ಪ ನೈಟ್ ಬೀಟ್ ನನ್ಮಕ್ಕಳೇನೋ ನೀವು...ಇವತ್ತು ರಾತ್ರಿ ಇನಿಸ್ಪೆಕ್ಟರ್‌ಗೆ ಬರ್‍ತೀನಿ—ಯಾಓನಾನ ಮನೆಗಿರೋದು ಕಾ[illegible] ಬೇಕು—ಮೇಲಕ್ಕೆ ರಿಪೋರ್ಟ್ ಕಳಿಸಿಬಿಡ್ತೀನಿ—ಉಶಾರ್...ಉಶಾರ್... ಎಂ[illegible] ಆರ್ಭಟಿಸಿದರು ಶ್ರೀಮಾನ್ ದಫೇದಾರ್ ದೇರಣ್ಣೋರು—ಉರುಫ್ ಪಕೋಡದಯ್ಯಾ. ನಿಜಕ್ಕೂ ಅವರ ಈ ತುಂಬಿದ ಸರ್ವೀಸಿನಲ್ಲಿ ಬಂದು ಹೋದ ಪೋಲೀಸ್ ಬಳಗದಲ್ಲಿ ಪಕೋಡದಯ್ಯ ಎಂದರೇ ಬೇಗ ಗುರ್ತು ಹತ್ತುತಿತ್ತು. ಅಷ್ಟೇಕೆ ಮೊನ್ನೆ ಅವರ ಮೆಹನತ್ತಿನಿಂದ ಸಿಕ್ಕಿ ಮಾಮೂಲಿಯ ಮನೆಯಲ್ಲಿ ಹಳೇ ಬೆಲ್ಲದಿಂದ ಇಳಿಸಿದ ಮಹಾ ಪಾನಕ (ಇದಕ್ಕೆ ಭೂಲೋಕ ಅಮೃತವೆಂದೂ ಪೆಸರುಂಟು) [illegible] ಕೇಸಿನಲ್ಲಿ ದೊರೆತ ಶಭಾಶಗಿರಿ ಅವರಿಗೆ ಮುಟ್ಟದೆ ಬೇರೊಬ್ಬ ದೇರಣ್ಣನಿಗೆ ತ[illegible] ಪಿತ್ತು. ಉರುಫ್ ಪಕೋಡದಯ್ಯನವರು ಎಂದು ವಿಳಾಸ ತಿದ್ದಿದ ಮೇಲೆ ಅ[illegible] ಕೈಸೇರಿತು. ಪಕೋಡದಯ್ಯನವರೆಂದರೆ ಅವರಿಗೂ ಕೋಪವಿಲ್ಲ—ಏಕೆಂದರೆ ಪಕೋಡ ಅವರಿಗೆ ಬಹು ಪ್ರಿಯವಾದ ತಿಂಡಿ. ಇದರ ವಿಷಯವಾಗಿ ಒಂದು [illegible] ಜನಿತವಾದ ಕಥೆಯುಂಟು. ಕಥೆ ಇದು ಎಂದು ದ|| ದೇರಣ್ಣನವರ ವಾದ. ಕ[illegible] ಯಲ್ಲ, ನಿಜಕ್ಕೂ ನಡೆದ ವಿಷಯವಿದು ಎಂದು ಕಾ|| ಫಕೀರಪ್ಪನವರ ವಾದ. ಅವತ್ತು ಸಂಜೆ ಜಟಕಾ ಸ್ಟ್ಯಾಂಡಿನ ಹತ್ತಿರ ನಿಂತಿದ್ದಾಗ ಕಾ|| ಫಕೀರಪ್ಪನವರು ಬಂದರು. ಆ ಮಾತು ಈ ವಿಷಯದಿಂದ ಶ್ರೀ ದ|| ದೇರಣ್ಣನವರ ಸಮಾಚಾರಕ್ಕೆ ಹೊರಳಿತು. ಅವರ ಸುದ್ದಿ ಬರಲಿಕ್ಕೆ ಕಾ|| ಫಕೀರಪ್ಪನವರ ನೈಟ್ ಬೀಟ್ ಕಾರಣ. ಅವರೆಂದರು. ...ನೈಟ್ ಬೀಟ್ ಇನ್ನೊಂದು ವಾರ ಪೂರೈಸಿದರೆ ಆಯ್ತು, ಸದ್ಯ. ದಿನಾ ಒಂದೂವರಾಣೆ ಮಿಗತ್ತೆ..." "ಅರೆ! ನಿನಗೆ ಹೇಗೆ

ಮಿಗತ್ತೆ ? ಎಂದಾಗ ಅವರು ...ನಿಜ ಹೇಳ್ತೀನಿ, ಕೇಳಿ...ರಾತ್ರಿ ಬೀಟಿಗೆ ಹೋಗೋಕೆ ಮುಂಚೆ—ದೇರಣ್ಣೋರ ಮನೆಗೆ ಹೋಗಿ—ಮೂಲೆ ಹೋಟ್ಲು ಈರುಳ್ಳಿ ಪಕೋಡ ಕೊಟ್ಟು ಹೋದರೇ...ರಾತ್ರಿ ಸುಖವಾಗಿ ಮನಿಕ್ಕೋಬಹುದು. ಇಲ್ದಿದ್ರೆ...ಬಂತು ಪ್ರಾಣಕ್ಕೆ...ಮರು ದಿನ ರಿಪೋರ್ಟೇ... ಎಂದ. ಆಗ ತಿಳಿಯಿತು ಯಾತಕ್ಕೆ ಒಂದೂವರಾಣೆ ಈತನಿಗೆ 'ಖರ್ಚಾಗಂತ. ...ನಿಜವಾಗ್ಲೂ ಪಕೋಡಾಂದ್ರೆ ಅಂಥಾ ಆಸೇನಾ ಅವರಿಗೆ ?... ಎಂದು ಫಕೀರಪ್ಪನ್ನ ಪೀಡಿಸಿ ದಾಗ ಬಾಯಿಬಿಟ್ಟ ಆತ. ಪ್ರೀತಿ!! ಆ ಪ್ರೀತೀನೇ ಅವರನ್ನ ಇನ್ನೂ ಜಮೇ ದಾರಾಗೋದಕ್ಕೆ ಬಿಡ್ಲಿಲ್ಲ...ಸಬ್‌ನಿಸ್ಪೆಕ್ಟ್ರ ಚಾನ್ಸು ಇಲ್ಲ ಮೂರು ವರ್ಷದ ಕೆಳಗಿನ ಮಾತು....ರಾಮದುರ್ಗ–ಕರಡೀಹಳ್ಳಿ–ಸುಂಕದ ಕೆರೆ ಅಮರಾವತಿ—ನಾಗನಕೆರೆ— ನಂದಿಗುಡಿ—ಅಂಬಾವರ—ಕಾಗೇಹಳ್ಳಿ, ಈ ಗ್ರಾಮಗಳನ್ನ ಕಳ್ಳರ ಗುರು ಖದೀ ಮರ ಅಪ್ಪ...ಕನ್ನೇಶ್ವರ ಭೀಮ...ಸೂರೇ ಹೊಡದು ನಡುಗಿಸಿದ್ದು ಗೊತ್ತಾ ?" ಕನ್ನೇಶ್ವರ ಭೀಮ ಎಂದೊಡನೆ...ಎದೆ ಗುಂಡಿಗೆ ಒಡಗೇ ಹೋಯ್ತು. ಅವನ ವಿಷಯ ಕೇಳಿ ಬಲ್ಲೆ. ಅವನ ಹೆಸರು ಇಡೀ ಊರನ್ನೇ ನಡುಗಿಸುತ್ತಿತ್ತು— ಎಂಥಾ ಆಫೀಸರ ಕೈಗೂ ಆವ ಸಿಕ್ಕಿಬಿದ್ದಿರಲಿಲ್ಲ. ಅಂಥವನ ಖದೀಮತೆಗೂ ದ|| ದೇರಣ್ಣನವರ ಉಪ ನಾಮಧೇಯಕ್ಕೂ ನಿಕಟ ಸಂಬಂಧವಿದ್ದ ಮೇಲೆ ಅವರ ಕಥೆ ಕೇಳಲು ಬಹು ಚೆನ್ನ. ಅದರಲ್ಲೂ ಮಾತಿನಲ್ಲಿ ಮುತ್ತು ಸುರಿಸಬಲ್ಲ ಶ್ರೀ ಕಾ|| ಫಕೀರಪ್ಪನವರ ಬಾಯಲ್ಲಿ ಕೇಳಲು ಬಹು ಸೊಗಸು. "ಶ್ರೀ ದ|| ದೇರಣ್ಣೋರ ಪಕೋಡ ಪ್ರಿಯತೆಗೂ...ಈ ಕನ್ನೇಶ್ವರ ಭೀಮನಿಗೂ ಸಂಬಂಧವಿದಯೆ ?. ಎಂದು ಕೆಣಕಿದೆ. ಸಂಬಂಧ! ಆ ಮಹಾರಾಯನೇ ಇವರ ಈ ಬಿರುದಿಗೆ ಕಾರಣ ಕನ್ನೇಶ್ವರ ಬಲೇ ನನ್ಮಗ ಅವನು—ಪೋಲಿಸ್‌ನವರಿಗೆ ಆಟ ಆಡ್ಸೋ ದೂಂದ್ರೆ ಅವನಿಗೆ ಕಳ್ಳತನ ಮಾಡೋಕಿಂತ ಜಾಸ್ತಿ ಖುಷಿ. ದೇರಣ್ಣೋರ ಕೆಟ್ಟ ಅದೃಷ್ಟಾನೋ. ಏನೋ ಮಟ ಮಟ ಮಧ್ಯಾಹ್ನ ಹನ್ನೆರಡೂವರೆ—ತುಂಬನಹಳ್ಳಿ ಕೆರೆ ಏರಿ ಮೇಲೆ ಕುದುರೆ ನಿಲ್ಸಿ ನೀರು ಕುಡಿತಾ ಅವ್ನೆ ಕನ್ನೇಶ್ವರ ಭೀಮ—ಇಂಥಾ ಚಾನ್ಸು ಸಿಗೋದುಂಟಾ–ನಾನು–ತಿಪ್ಪೇರುದ್ರ–ಕುಂಸಿ ಕರಿಯ–ದೇರಣ್ಣೋರು ಹಂಗೇ ಹರಟೆ ಹೊಡೀತಾ ಆ ಕಡೇನೇ ಬರ್‍ತಾ ಇದ್ರು.ಆಗ ಯಾವ ಕಾಲ ಗೊತ್ತಾ— ಸರ್ಕಾರದೋರು ಸಾರಿದ್ರು—ಬದುಕಾನಾ ಆಗ್ಲಿ, ಸತ್ತಾಗಾನ ಆಗ್ಲಿ ಕನ್ನೇಶ್ವರ ಭೀಮನ್ನ ಹಿಡ್ಕೊಂಡು ಬಂದ್ರೆ ಐದು ಸಾವಿರ ಇನಾಂ ಅಂತ ಡಂಗುರ ಹೊಡೆಸಿದ್ರು. ದ|| ದೇರಣ್ಣೋರು. —ಫಕೀರ ಪಕಡ್ರೆ ಕನ್ನೇಶ್ವರಕು.... ಎಂದು ಐದು ಸಾವಿರ ಜೇಬಿಗೆ ಬಿದ್ದಂತೇ ಹೇಳಿದರು. ನನಗೆ ಕೈ ಕಾಲು ತಣ್ಣಗಾಯ್ತು—ಕನ್ನೇಶ್ವರನ್ನ ಪಕಡ್ರೆ ಅನ್ನೋದು ಸುಲಭ—ಓಡಿಹೋಗಿ ಬೆಂಕಿ ಬಿಡಿಯೋಕೆ ಹೋದಾಗೇ ಹೋಗಬೇಕು.

ನಾವು ಪೆಜ್ಜೆ ಮೇಲೆ ಪೆಜೆ ಇದುತ್ತಾ ಕೆರೆ ದಂಡೆ ಬಳಿ ಬಂದೆವು. ಆತ ನೀರು ಕುದಿದು ಮೇಲಕ್ಕೆ ಆಗ ತಾನೆ ಬರ್‍ತಿದ್ದ. ಶಾಂತಮೂರ್ತಿ ಕನ್ನೇಶ್ವರ—ನಮ್ಮನ್ನ ನೋಡ್ದ—ಆ ಹುರಿ ಮೀಸೆ ತಿರುಗಿಸಿ ಕಿರು ನಗೆ ನಕ್ಕ—ಆ ನಗುಗೆ ಕುಂಸಿ ಕರಿಯ ಬೆಪಬಪ ಎಂದು ಗಡಗಡ ನಡುಗಿ ಬೀಳುತ್ತಿದ್ದ ವೇಟ—ಎಡಗಾಲ ಚಪ್ಪಲೀನು ಬಿಟ್ಟು—ಓಡೇ ಹೋದ. ಯಾಕೇಂದ್ರೆ ಕನ್ನೇಶ್ವರನ ಕೈಲಿ ಅಪನಾಗಲೆ ಏಟು ತಿಂದಿದ್ದ ಒಂದು ಸಲ. ಜೋರಾಗಿ ಕೂಗ್ತಿದ್ದೀನಿಂತ ತಿಳಕೊಂಡು ದೇರಣ್ಣ ಗಂಟ್ಲಲ್ಲೇ ಗುಸ ಗುಸ ಅನ್ನುತ್ತ "ಹಿಡಿರ್‍ರೋ—ರ್‍ರೋ—" ಎಂದರು—ನಾವೆಲ್ಲಾ ಸೊಳ್ಳೆ ಸಮಾನ ಕನ್ನೇಶ್ವರನಿಗೆ. ಅವನೆಂದ "ಯಾರ್‍ರೋ ಅವನು" ಎಂದು— ನಾನು "ದಫೇದಾರ್‍ರು ದೇರಣ್ಣೋರು— ಎಂದ. ಕನ್ನೇಶ್ವರ ಮತ್ತೆ "ಕರಿಯೋ ಆ ನನ್ಮ ಗನ್ನ... ಎಂದು ಗುಟುರು ಹಾಕಿದ. ನಾನು ಓಡಿದ್ದು ಕಂಡು ತಿಪ್ಪೇರುದ್ರನೂ ನನ್ನ ಹಿಂದೇ ಓಡಿದ—ಇಬ್ಬರ ಓಟಾನೂ ಕಂಡ ದ॥ ದೇರಣ್ಣೋರು ಏನೋ ಅಚಾತುರ್ಯ ನಡೀತೆಂದು ಅವರೂ ಕಂಬಿಕಿತ್ತರು. "ನಿಲ್ಲಿ ದೇರಣ್ಣೋರೇ. ಎಂಬ ನನ್ನ ಕೂಗು ಅವರ ಕಾಲಿಗೆ ಇನ್ನೂ ಬಲಾ ಕೊಟ್ಟಿತು...ಓಡೇ ಓಡಿದರು ಕಾಡು ಮೇಡು ಬಿದ್ದು. ಕನ್ನೇಶ್ವರ ಖದೀಮ—ಅವರಿಗೆ ಇಂಥಹವರನ್ನ ಕಂಡರೆ ಬಲೇ ಮಜ—ಕುದುರೆಗೆ ಕಾಲಿಂದ ಕಚಗುಳ್ಳಿ ಕೊಟ್ಟ—ನಾಗಾಲೋಟಕ್ಕೆ ತೊಡಗಿತು. ದೇರಣ್ಣೋರು ಮುಂದೆ—ಅವರ ಹಿಂದೆ ನಾನು—ನನ್ನ ಹಿಂದೆ ತಿಪ್ಪೇರುದ್ರ—ಅವನ ಹಿಂದೆ ಕುದುರೆ ಏರಿದ ಕನ್ನೇಶ್ವರ!!—

"ಆ ಮೇಲೆ? ಸಿಕ್ಕಿಬಿದ್ದಿರಾ ? ಚೆನ್ನಾಗಿದೆ ಸ್ವಾಮಿ ನೀವು ಕೇಳೋದು— ಅವನ ಕೈಗಲ್ದಿ ಮತ್ತ್ಯಾರ ಕೈಗೆ ಸಿಕ್ಕಿಬೀಳಬೇಕು...ನಗಬೇಡಿ. ಕನ್ನೇಶ್ವರನ ಸಮಾ ಚಾರಾಂದ್ರೆ ಹಾಗೇ...ನಾವು ಅವನ್ನ ಹಿಡಿಯೋದಕ್ಕಿಂತ ಅವನೇ ನಮ್ಮನ್ನ ಗುಡು ಗಾಡಿಸಿ ಆಟ ಆಡ್ಸೋದೇ ಜಾಸ್ತಿ—ಆಮೇಲೆ ದ॥ ದೇರಣ್ಣೋರು ನಿಂತರು— ಸಾವಿಬ್ರೂ ನಿಂತೆವು ಸುಸ್ತಾದ್ದರಿಂದ...ಏದುತ್ತಿದ್ದೆವು. ಕನ್ನೇಶ್ವರ "ದಫೇದಾರ್‍ರೇ. ಹಿಡೀರಿ ನನ್ನ" ಎಂದು ಕೈ ಮಾಡಿದ...ಅದೇನು ಚಮಕ್ ಮೇಲೆ ದೇರಣ್ಣೋರಿಗೆ ದೇವರು ಬುದ್ಧಿ ಕೊಟ್ನೋ, ಲಪಕ್ ಅಂತ ಅವನ ಕೈಹಿಡಿದು ಎಳೆದು ಬೇಡಿ ಹಾಕೇ ಬಿಟ್ರು...ಒಂದು ಕೈಗೆ ನನ್ನ ಕಣ್ಣೆ ನಂಬಲಿಲ್ಲ...ತಲೆ ಗಿಮಿ ಗಿಮಿ ಗಿಮಿ ತಿರುಗಿತು ದೇರಣ್ಣೋರು ಮೀಸೆ ತಿರುವುತ್ತಿದ್ದರು...ಇನ್ನು ನನ್ನ ಓಡಿಸಿ ಮತ್ತ್ಯಾರು ಮುಂದಿನ್ನ ಕರೆತಂದು ಕನ್ನೇಶ್ವರನ್ನ ಜೈಲಿಗೆ ಎಳೆಯೋದು, ೫೦೦೦ ರೂ· ಜೇಬಿಗೆ ಬಿಡೋದು ಇಷ್ಟೇ ಉಳಿದದ್ದು...ಆಗ ಕಿಲಾಡಿ ಕನ್ನೇಶ್ವರ ಏನು ಮಾಡಿದ ಗೊತ್ತೆ? ಮೆತ್ತಗೆ ಕುದುರೆ ಜೀನು ಪಕ್ಕಕ್ಕೆ ಕೈ ಹಾಕಿ ಒಂದು ಪೊಟ್ಣ ಎಳೆದ...ಘಮ ಘಮ ಹಸನ್ ಹಸುವಿನ ತುಪ್ಪದಲ್ಲಿ ಕರಿದ ಗೋಡಂಬಿ ಎದ್ದು ಕಾಣುತ್ತಿದ್ದ ಪಕೋಡ

ಒಂದು ಸೇರು ಕೂತಿತ್ತು ಆ ಪೊಟ್ಣದಲ್ಲಿ. ಜುಳು ಜುಳು ಜುಳು ನಲ್ಲೀಲಿ ಇಳಿದ ಹಾಗೆ ಸುರೀತು ನೀರು ದೇರಣ್ಣೋರ ಬಾಯಿಂದ."

"ಷ್ಟಷ್ಟಷ್ಟಷ್ಟ—ಚೆನ್ನಾಗಿದೆ—ಆಮೇಲೆ" "—ಬೇಡಿ ಇಲ್ಲದ ಕೈಯಲ್ಲಿ ಪಕೋಡದ ಪೊಟ್ಣ ಹಿಡಿದು ದ॥ ದೇರಣ್ಣೋರ ಮೂಗಿನ ಹತ್ತಿರ ಅತ್ತಿಂದ ಇತ್ತ ನವಿರಾಗಿ ಆಡಿಸಿದ ಆ ಕನ್ನೇಶ್ವರ. ಪುಂಗಿ ನಾದಕ್ಕೆ ಹಾವು ಹೆಡೆ ಆಡಿಸೋ ಹಾಗೆ ಆ ಪೊಟ್ಣದ ಗುಂಟಾ ತಲೆ ಆಡಿಸಿದರು ದೇರಣ್ಣೋರು. ಬೇಡಿ ಬಿಚ್ಚಿದರೆ ನೀನೇ ಪೊಟ್ಣ ಬಿಚ್ಚಬಹುದು" ಎಂದ ಕನ್ನೇಶ. ಎಂಥಾ ಪ್ರಸಂಗ—ಒಂದು ಕಡೆ ೫೦೦೦ ರೂಪಾಯಿ; ಒಂದು ಕಡೆ ಪಕೋಡದ ಪೊಟ್ಣ—ದೇರಣ್ಣೋರ ತಕ್ಕಡೀಲಿ ಪಕೋಡವೇ ತೂಕವಾಗಿತ್ತು. ಆ ಅರೆಕ್ಷಣದಲ್ಲಿ ಎಡಗೈಯಲ್ಲಿ ಪೊಟ್ಣ ಇಸ್ಕೊಂಡು, ಬಲಗೈಯ್ಯಲ್ಲಿ ಬೇಡಿ ಬಿಚ್ಚೇಬಿಟ್ಟರು.—"

"ಒಂದು ಕೈಗೆ ಬೇಡಿ ಹಾಕಿದ್ದರೇ ಕನ್ನೇಶ್ವರನಿಗೆ ಯಾಕೆ ಭಯ ?—ಹಾಗೇ ಓಡಿಹೋಗಬಹುದಿತ್ತಲ್ಲ ?"

—ಆಗಲೇ ಹೇಳಿಲ್ವೆ ನಾನು—ಕನ್ನೇಶ್ವರನಿಗೆ ಕಾನಿಸ್ಟೇಬಲ್ ಕೈಲಿ ಕಾದಾದೋದು ಬೆಕ್ಕಿಗೆ ಇಲಿ ಜೊತೆ ಚೆನ್ನಾಟ ಆಡಿಧಂಗೆ ಅಂತ—ನೀವು ಕೇಳೋ ಪ್ರಶ್ನೆ ಚೆನ್ನಾಗಿದೆ—ಶ್ರೀ ದ॥ ದೊರಣ್ಣೋರನ್ನ ಆಡಿಸಲಿಕ್ಕೆ ಅವನು ಹೀಗೆ ಮಾಡಿದ್ದು—ಆಯ್ತಲ್ಲ—ದೇವ್ವನಂಥ ಪಕೋಡದ ಪೊಟ್ಣ ತೊಗೊಂಡು ತಲೆ ಬಗ್ಗಿಸಿ ತಿನ್ನ ತೊಡಗಿದರೇ ಹೊರ್ತು, ನಾವು ಇಬ್ಬರು ಹತ್ತಿರಲೇ ಇದ್ದೀವೀನ್ನೋದು ಕೂಡ ಅವರಿಗೆ ತೋಚಲಿಲ್ಲ—ಅದು ಅವರ ತಪ್ಪಲ್ಲ; ಹಸುವಿನ ತುಪ್ಪದಲ್ಲಿ ಕರಿದ ಪಕೋಡದ ತಪ್ಪು. ಅರ್ಧ ತಿಂದು ಅರ್ಧ ಹಾಗೇ ಜೇಬಿಗೆ ಬಿಟ್ಟರು— "

"ಅಲ್ಲಾ—ಮನೆಗೆ ಒಯ್ಯಲಿಕ್ಕೆ—ಇಲ್ದಿದ್ರೆ ಧರ್ಮಪತ್ನಿ—ಸಾವಂತ್ರಮ್ಮನವರು ದವಡೆಗಿಕ್ಕಿಬಿಟ್ಟಾರು. "

"ಸಾವಂತ್ರಮ್ಮ—ದೇರಣ್ಣೋರ ಹೆಂಡ್ತಿನಾ? ಅವರಿಗೆ ಲಗ್ನವಾಗಿದೆಯೆ?.."

"ಚೆನ್ನಾಯ್ತು—ಆ ಮದುವೆ— ಆ ಅದರ ಸಂಸಾರದ ಸೊಗಸಿನ ಕಥೆ—ಅರೆ ಆಗಲೆ ಹೊತ್ತಾಯ್ತು—ಅವರೇ ಬರ್‍ತಾ ಇದಾರೆ—" ಎಂದು ಮೀಸೆ ಮೇಲೆ ಕೈಯಾಡಿಸುತ್ತಾ ಬಂದ ದೇರಣ್ಣನವರಿಗೆ ಫಕೀರ ನೆಟೆದು ನಿಂತು ಸಲಾಂ ಹಾಕಿದ. ಅವರೂ ಸಲಾಂ ಹಾಕಿ ಹೊರಟೇ ಹೋದರು—ಅವರು ಕೊಂಚ ದೂರ ಹೋದ ಮೇಲೆ ಫಕೀರ—"ಅವರು ಚೋರಿ ಹಿಡಿದ ಕಥೆ, ನಾಳೆ ಮೆಜಿಸ್ಟಿಕ್ ಹತ್ರ ಬನ್ನಿ. ಹೇಳ್ತಿನಿ—" ಎಂದು ಅವರನ್ನೇ ಹಿಂಬಾಲಿಸಿ ಹೊರಟೇ ಹೋದ—ಆ ಕಥೆಗೆ ನಾನು ಜಾತಕ ಹಕ್ಕಿಯಂತೆ ನಾಳೆ ಮುಂಜಾನೆಗೆ ಕಾದು ಕುಳಿತೆ.



"ಇನ್ನು ಏಳು ದಿನ ಇಂಗೇ ಕುಂತ್ರೆ...ನನ್ಹೆಸ್ರೂ ಗಿನ್ನೀಸ್‌ನಲ್ಲಿ ಬಂದಂಗೇನೇ !"

ಒಂದು, ಎರಡು...

—ಲೀಲಾ ಮಿರ್ಲೆ

ಕೆಲವು ದಿನಗಳ ಹಿಂದೆ ನನ್ನ ಕೈಗೊಂದು ಮಾಸ ಪತ್ರಿಕೆ ಸಿಕ್ಕಿತು. ಅದರಲ್ಲಿ 'ಕರ್ನಾಟಕದ ಶಿಲ್ಪಕಲೆ' ಎಂಬ ಶೀರ್ಷಿಕೆ ನನ್ನ ಗಮನ ಸೆಳೆಯಿತು. ಓದಲು ಶುರು ಮಾಡಿದೆ.

ಆಳವಾಗಿ ಅಧ್ಯಯನ ಮಾಡಿ ಬರೆದ ಲೇಖನ. ಬಲು ಸ್ವಾರಸ್ಯವಾಗಿತ್ತು. ಎರಡನೆಯ ಪುಟದಲ್ಲಿ ವಿಷಯ ಅಷ್ಟು ಸ್ಪಷ್ಟವಾಗಿರಲಿಲ್ಲ. ಯೋಗಾಭ್ಯಾಸದ ಬಗ್ಗೆ ಶುರುಮಾಡಿಕೊಂಡಂತಿತ್ತು ಲೇಖಕ. ಯೋಗಾಸನದ ಭಂಗಿಗಳನ್ನು ಯಾವುದೋ ದೇವಾಲಯದ ಗೋಡೆಯ ಮೇಲೆ ಕೆತ್ತಿರಬೇಕು. ಅದಕ್ಕೆ ಇದು ಇನ್‌ಟ್ರೊಡಕ್‌ಶನ್ ಇರಬಹುದು, ತಾಳ್ಮೆಯಿಂದ ಓದೋಣ ಅಂತ ಯೋಗದ ನಾನಾ ಆಸನಗಳ ಬಗ್ಗೆ ಎರಡು ಪುಟ ಓದಿದೆ. ಮುಂದಿನ ಪುಟಕ್ಕೆ ಹೋದರೂ ಲೇಖಕ ಶಿಲ್ಪಕಲೆಗೂ ಯೋಗಕ್ಕೂ ಕನೆಕ್‌ಶನ್ನೇ ತರಲಿಲ್ಲ. ಬದಲಾಗಿ ಗಿಣಿಗಳ ಆಹಾರ. ವಿಹಾರ, ವ್ಯವಹಾರಗಳ ಬಗ್ಗೆ ದೀರ್ಘ ಭಾಷಣ ಬಿಗಿಯ ಹತ್ತಿದ. ಯಾಕೋ ನನ್ನ ತಾಳ್ಮೆ ಕರಗಿತು. ಇದೆಂಥ ಲೇಖನಗಳು ! ಶುದ್ಧ ಅಸಂಬದ್ಧ !! ಈ ತರಹ ಅವಿವೇಕಿಗಳು ಬರೆದರೆ ಪ್ರಿಂಟ್ ಮಾಡೋ ಮಹಾನುಭಾವರೂ ಇದಾರಲ್ಲಾ ಅಂತ ರೇಗಿತು.

ಏಕೋ ಏನೋ, ಪುಟದ ಮೇಲ್ಭಾಗಕ್ಕೆ ನನ್ನ ಗಮನ ಹರಿಯಿತು. 25 ನೆ ಪುಟದ ಪಕ್ಕದಲ್ಲಿ 13, ಆನಂತರ 8 ನೆ ಪುಟ !

ಕ್ಷಮಿಸಿ, ಲೇಖಕರೆ. ಕ್ಷಮಿಸಿ, ಸಂಪಾದಕರೆ ಬೈಂಡರ್ ಮಹಾಶಯರ ಹಾಸ್ಯ ಪ್ರಜ್ಞೆಯಿಂದಾಗಿ ಹೀಗಾಗಿದೆ ಎಂದು ಅರಿವಾಯಿತು.

O O O O

ರೇಟ್ ಬೋರ್ಡ್

—"ಗುರುಪ"

ಸನ್ಮಾನ್ಯ ಗೃಹ ಸಚಿವರ,

ಅಖಿಲ ಕರ್ನಾಟಕದ ಉದ್ದಗಲದಲ್ಲಿ—ಅದರಲ್ಲೂ ರಾಜಧಾನಿ ಬೆಂದಕಾಳೂರು ಹಾಗೂ ಅದರ ಸುತ್ತ ಮುತ್ತ—ನಿಯೋಜಿತ ರೀತಿಯಲ್ಲಿ ಡಕಾಯಿತಿಗಳು ನಡೆದರು ಹಾಗೂ ಇಂದಿಗೂ ನಡೆಯುತ್ತಿರುವುದು ಸರಿಯಷ್ಟೆ. ಇವನ್ನು ಕೂಡಲೇ ನಿಲ್ಲಿಸಲು ನೀವು ಅನೇಕ ಹೇಳಿಕೆಗಳನ್ನು ನೀಡುವುದರ ಮೂಲಕ ಸರ್ವ ಪ್ರಯತ್ನ ನಡೆಸಿದ್ದೀರಿ. ಇದರಂತೆ ನಿಮ್ಮ ದಳ ಹಾಗೂ ಅವರ ಶ್ವಾನಗಳು ಈ ಡಕಾಯಿತರನ್ನು ಹಿಡಿಯದೆ ಸೋತಿದ್ದು ಜನಜನಿತವಷ್ಟೆ. ಮುಂದೆ ಸಾರ್ವಜನಿಕ ನಿಂದನೆಗೆ ಅಂಜಿಯೋ, ಅಥವಾ ಹೀಗೆ ನಿಂದನೆ ಮಾಡಿದವರಿಗೂ ಸಮಾನ ಅವಕಾಶ ಹಾಗೂ ಬಹುಮಾನದ ಹಣ ನೀಡುವ ಉದ್ದೇಶದಿಂದಲೋ, ಡಕಾಯಿತರನ್ನು ಕೊಂದವರಿಗೆ 25 ಸಾವಿರ ರೂಪಾಯಿ. ಅವರ ಸುಳಿವು ನೀಡಿದವರಿಗೆ 10, ಪಕ್ಕದ ಮನೆಯಲ್ಲಿ ನಡೆಯುವ ಡಕಾಯಿತಿಯನ್ನು ಹೊರಗೆ ಬಂದು ನೋಡಿದವರಿಗೆ ಇಷ್ಟು. ತಮ್ಮ ಮನೆಯಲ್ಲೇ ಇದ್ದು ಕಿಟಕಿಯಿಂದ ನೋಡಿದವರಿಗೆ ಅಷ್ಟು, ಎಂದು ರೇಟು ಪ್ರಕಟಿಸಿದ್ದೀರಿ, ಪತ್ರಿಕೆಯಲ್ಲಿ ಪ್ರಕಟವಾದ ಈ ರೇಟ್ ಯಾದಿಯನ್ನು ಓದಿದ ನಮ್ಮ ಮಂಡಳಿ ಅಂದರೆ "ಧಾರವಾಡ ಜಿಲ್ಲಾ ಕ್ರಿಯ ನಿಯಂತ್ರಣ ಮಂಡಳಿ" (ಚುಟುಕಾಗಿ "ಧಾಕ್ರಮ") ಯ ಸದಸ್ಯರಿಗೆ ಇದು ಸರಿ ಕಂಡಂತಿಲ್ಲ. ಅನೇಕ ಸದಸ್ಯರು ನಮ್ಮ ಮಂಡಳಿಗೆ ಉದ್ದುದ್ದ ಪತ್ರ ಬರೆದು ಈ ಡಕಾಯಿತರ ವಧೆ ಮೊತ್ತದ ಬಗ್ಗೆ ಚರ್ಚಿಸಲು ಕೂಡಲೇ ಸಾಮಾನ್ಯ ಸಭೆ ಕರೆಯಲು ನೋಟೀಸಿದ್ದರು. ನಿಮಗೆ ಗೊತ್ತಿರಲಿಕ್ಕಿಲ್ಲ. ನಮ್ಮ ಮಂಡಳಿ "ಕಕ್ರಮ" ಅಂದರೆ "ಕರ್ನಾಟ ಕ್ರಿಯ ನಿಯಂತ್ರಣ ಮಂಡಳಿ" "ಭಾಕ್ರಮ" ಹಾಗೂ "ವಿಕ್ರಮ" (ಭಾ–ಅಂದರೆ ಭಾರತ, ವಿ–ಎಂದರೆ ವಿಶ್ವ ಎಂದು ಓದಿಕೊಳ್ಳಬೇಕು) ಗಳಿಗೆ ಸದಸ್ಯತ್ವ ಹೊಂದಿದೆ. ನಿಯಮದಂತೆ ನಾವು ತೆಗೆದುಕೊಂಡ ನಿರ್ಣಯಗಳನ್ನು ನಮ್ಮ–ನಮ್ಮಲ್ಲಿ ವಿನಿಮಯ ಮಾಡಿಕೊಳ್ಳುವುದಿದೆ, ಇದರಿಂದಾಗಿ ಯಾವುದೇ ಸಮಸ್ಯೆಯ ಬಗೆಗೆ ನಮ್ಮದೇ ಧ್ವನಿ (Support) ಎತ್ತಲು ಅಥವಾ ಯಾರಾದರೂ ಆಗಲೇ ಈ ಬಗ್ಗೆ ಧ್ವನಿ ಎತ್ತಿದ್ದರೆ ಅವರಿಗೆ (ಕಂಠ) ಬೆಂಬಲ ನೀಡಲು ನಮಗೆ ಸಾಧ್ಯವಾಗುತ್ತದೆ.

"ಧಾಕ್ರಮ" ಕ್ಕೆ ಈ ಕೆಳಕಂಡ ಅನೇಕ ಸ್ಥಳೀಯ ಸಂಸ್ಥೆಗಳಾದ ದಿನ,ಕಾಯಂ, ಜೀತ, ವಿಮುಕ್ತ, ಒಕ್ಕೂಡಿದ ಹಾಗೂ ಕೂಡದ ಕೂಲಿಕಾರರ, ಶ್ರಮಿಕ ಹಾಗೂ ಬುದ್ಧಿ ಜೀವಿಗಳ, ಪುರುಷರ ಹಾಗೂ ಮಹಿಳೆಯರ, ಬಾಲಕರ, ಪ್ರೌಢರ ಹಾಗೂ ವೃದ್ಧರ, ನಿಯಂತ್ರಿತ ಹಾಗೂ ನಿಯಂತ್ರಣರಹಿತ, ತರಬೇತಿ ಪಡೆದ ಹಾಗೂ ರಹಿತ, ವಿದ್ಯಾ ಸಹಿತ ಹಾಗೂ ರಹಿತ, ಕಿರುಕುಳ (Retail) ಹಾಗೂ ಟೋಕ (Wholesale), ಉದ್ರಿ ಹಾಗೂ ನಗದು, ಸಹಕಾರಿ ಹಾಗೂ ಖಾಸಗಿ ಮುಂತಾದ ವಿವಿಧ ರಂಗಗಳ, ಮಟ್ಟದ ವಿಚಾರವಾದಗಳು, ವ್ಯಾಪಾರಿಗಳು, ಗ್ರಾಹಕರು, ದಲ್ಲಾಳಿಗಳು ಹೀಗೆ ಇನ್ನೂ ಅನೇಕ ನಮೂನಿಯ ಜನರು ಸದಸ್ಯರಾಗಿದ್ದಾರೆ. ಇವರೆಲ್ಲರ ಆಗ್ರಹದ ಮೇರೆಗೆ ಇಂದು ನಮ್ಮ ಮಂಡಳಿ ಅಂದರೆ "ಧಾಕ್ರಮ" ದ ಸಭೆ ಕರೆದಾಗ ನೀವು ಡಕಾಯಿತರ ವಧೆಗೆ ನಿಗದಿ ಮಾಡಿರುವ ರೇಟು ಅಂದರೆ 25 ಸಾವಿರ, ಎಲ್ಲರಿಗೂ ವಿಶೇಷ ಚರ್ಚಾ ವಸ್ತುವಾಯಿತು. ಸದಸ್ಯರಲ್ಲಿ ಅನೇಕರು ಕೂಡಲೇ ಈ ಕೆಳಗಿನ ವಿಷಯಗಳಿಗೆ ನಿಮ್ಮಿಂದ ಸೂಕ್ತ ವಿವರಣೆ ಪಡೆದು ಮುಂದಿನ ಸಭೆಯ ಗಮನಕ್ಕೆ ತರಲು ಸೂಚಿಸಿದ್ದಾರೆ. ಅಲ್ಲದೆ ನಮ್ಮ ಇತರೆ ಮಂಡಳಿಗಳಿಗೂ ಈ ಮಾಹಿತಿಯನ್ನು ತಿಳಿಸುವುದು ನಮ್ಮ ಕರ್ತವ್ಯವೂ ಇದೆ. ಆದ್ದರಿಂದ ಈ ಕೆಳಗಿನ ಪ್ರಶ್ನೆಗಳಿಗೆ ಕೂಡಲೇ ಸೂಕ್ತ ಉತ್ತರ ಕಳುಹಿಸಿ ಸಹಕರಿಸಬೇಕೆಂದು ಕೋರುತ್ತೇವೆ:

1. ಡಕಾಯಿತರನ್ನು ಕೊಂದರೆ 25 ಸಾವಿರ ಎಂದು ನಿಮ್ಮ ರೇಟು. ಅಂದರೆ ರೀಟೇಲ್‌ನಲ್ಲಿ ಒಂದು ಹೆಣಕ್ಕೆ 25. ಹೋಲ್‌ಸೇಲ್‌ನಲ್ಲಿ ಈ ರೇಟೇನಾದರೂ ಕಡಿಮೆ ಆಗುತ್ತದೆಯೇ ?

2. ಡಕಾಯಿತರೆಂದು ಕೊಲ್ಲಲ್ಪಟ್ಟ ವ್ಯಕ್ತಿಗಳ ಹೆಣವನ್ನು ಎಲ್ಲಿಗೆ ತಂದು ಡೆಲವರಿ ಮಾಡಬೇಕು ?

3. ಅವರ ಹೆಣ ಕಳ್ಳತನಕ್ಕೆ ಬಂದ ಮನೆಯ ಹತ್ತಿರವೇ ಇರಬೇಕೆಂಬ ನಿಯಮ ಇದ್ದರೆ ಅದು ಮನೆಯೊಳಗೆ ಅಥವಾ ಹೊರಗೆ ಎಲ್ಲಿದ್ದರೆ ಸೂಕ್ತ ?

4. ಡಕಾಯಿತರನ್ನು ಕೊಲ್ಲಲಾಗದಿದ್ದು ಕೇವಲ ಅವರ ಕೈ ಅಥವಾ ಕೈಗಳು, ಅಥವಾ ಕಾಲುಗಳು, ಹೀಗೆ ಯಾವ ಅಂಗವನ್ನು ಹಾಗು ಎಷ್ಟು ಸಂಖ್ಯೆಯಲ್ಲಿ ತೆಗೆದರೆ ಎಷ್ಟು ಹಣ ಸಿಗುತ್ತದೆ ? ಏಕೆಂದರೆ ನಮ್ಮ ಭಾಗದಲ್ಲಿ ಈ ಪ್ರತಿಯೊಂದು ಅಂಗಕ್ಕೂ ತನ್ನದೇ ಆದ ರೇಟ್ ಇದೆ.

5. ಡಕಾಯಿತರನ್ನು ಕೇವಲ ಮುಹಿಳೆಯರೇ ಕೊಂದರೆ ಈ ರೇಟಿಗೆ ವಿಶೇಷ ವೇಟೇಜ್ (Weightage) ಇದೆಯೋ?

6. ಡಕಾಯಿತರಿಗೆ ಕಳ್ಳತನಕ್ಕೆ ಬಂದಲ್ಲಿ ಗಾಯವಾಗಿ ನಂತರ ಅವರು ಪೋಲಿಸ್ ಅಥವಾ ವೈದ್ಯರ ಕಸ್ಟಡಿಯಲ್ಲಿ ಸತ್ತರೆ ಹಣವನ್ನು ಯಾರು ಯಾರು ಯಾವ ಪ್ರತಿಶತದಲ್ಲಿ ಹಂಚಿಕೊಳ್ಳಬೇಕು ?

7. ನೀವು ಪ್ರಕಟಿಸಿರುವ ಈ ಬಹು ಮೊತ್ತದ ವಧೆ ಹಣದ ಆಸೆಗೆ ಬಲಿಯಾಗಿ ಸಾರ್ವಜನಿಕರು ಅದರಲ್ಲೂ ನಮ್ಮ ತರುಣರು ಡಕಾಯಿತರೊಡನೆ ಸೆಣಸಿ ಸತ್ತರೆ ಅಥವಾ ಗಾಯಗೊಂಡರೆ ಅವರಿಗೆ ಸರಕಾರದಿಂದ ಪರಿಹಾರ ಉಂಟೋ ? ಈ ಹಣ ಪಡೆಯಲು "ಅದು ತಮ್ಮಿಂದಲೇ ಆದ ಗಾಯ" ಎಂದು ಡಕಾಯಿತರಿಂದಲೇ ಪತ್ರ ತರಬೇಕೆ ?

8. ಸಾರ್ವಜನಿಕರಿಗೆ ಪರಿಹಾರ ಹಣ ಇದ್ದರೆ ಇದು ಇಡೀ ರಾಜ್ಯಕ್ಕೆಲ್ಲಾ ಒಂದೇ ರೇಟೇ ಅಥವಾ ಕಾಲ ಬಜಾರ್, ಗಾಂಧಿ ರಸ್ತೆ, ದುರ್ಗದ ಬೈಲು, ವಿನೋಬಾ ನಗರ, ಶಿವಪ್ಪನಾಯಕನ ವೃತ್ತ, ರಾಮನಗರ, ನಜರಾಬಾದ್ ಹೀಗೆ ಸ್ಥಳೀಯವಾಗಿ ಬೇರೆಯಾಗುತ್ತದೆಯೋ ?

9. ಡಕಾಯಿತರನ್ನು ಕೊಂದ ಎಷ್ಟು ಗಂಟೆ ಅಥವಾ ದಿನಗಳೊಳಗೆ ನಿಮಗೆ ಈ ಸುದ್ದಿ ಮುಟ್ಟಿಸಬೇಕು? (ಏಕೆಂದರೆ ನಮ್ಮಲ್ಲಿ ಅತ್ಯಾವಶ್ಯಕವಾಗಿ ಬೇಕೆಂದಾಗ ಫೋನ್ ಕೆಲಸ ಮಾಡುವುದಿಲ್ಲ, ಬಸ್‌ಗಳು ನಿಲ್ಲುವುದಿಲ್ಲ, ಆಟೋದವರು ಬರುವುದಿಲ್ಲ. ಇವೆಲ್ಲವನ್ನು ದಾಟಿ ಬಂದರೂ ಸಂಬಂಧಪಟ್ಟ ಆಫೀಸಿನಲ್ಲಿ ಬೇಕಾದವರು ಇರುವುದಿಲ್ಲ.)

10. ಈ ಡಕಾಯಿತರ ವಧೆಯ ಬಹುಮಾನವನ್ನು ಈ ಕೈಯಿಂದ ಹಣ ಕೊಟ್ಟು ಆ ಕೈಯಿಂದ ಹಣ ಪಡೆಯಬಹುದೆ ? (ಅಂದರೆ Carry and cash?) ಅಥವಾ ಇದನ್ನು ಮುಂದೆ ಯಾವುದಾದರೂ ವಿಶೇಷ ಸಂದರ್ಭದಲ್ಲಿ ಅಂದರೆ ರಾಜ್ಯೋತ್ಸವ, ಗಣರಾಜ್ಯೋತ್ಸವ ಅಥವಾ ಹೀಗೆ ಪ್ರಾಣ ತೆತ್ತವರ ವಾರ್ಷಿಕೋತ್ಸವ ಸಂದರ್ಭದಲ್ಲಿ ನೀಡಲಾಗುವುದೇ?

11. ಈ ವಧೆ ಹಣದ ಮೇಲೆ ಆದಾಯ, ವಾಣಿಜ್ಯ, ಹಾಗೂ ಮಾರಾಟ ತೆರಿಗೆ ಇದೆಯೆ? ಇದ್ದರೆ ಎಷ್ಟು ಪ್ರತಿ ಶತ ?

12. ಈ ಡಕಾಯಿತರ ವಧೆಯಿಂದ ಬಂದ ಹಣದಲ್ಲಿ ಎಷ್ಟು ಪ್ರತಿ ಶತದಂತೆ ರೇವಣಿ ಅಥವಾ ಉಳಿತಾಯ ಮಾಡಬೇಕು ? (ಏಕೆಂದರೆ ಇತ್ತಿತ್ತ ಲಾಗಿ ಯಾವ ಕೆಲಸಕ್ಕೂ ಸರ್ಕಾರಿ ಕಛೇರಿಗಳಲ್ಲಿ ಇಂತಹ ಪತ್ರಗಳನ್ನು ಮೊದಲು ಕೊಂಡು ತರಲು ಹೇಳುತ್ತಾ, ಅದೇನೋ ಅವರಿಗೆ ಒಂದು ಗುರಿ ಕೊಟ್ಟಿರುತ್ತಾರಂತೆ.)

ಕ್ಷಮಿಸುವುದು. ನಮ್ಮ ಮಂಡಳಿಯ ಸಾಮಾನ್ಯ ಸಭೆ ಇನ್ನೂ ನಡೆದಿದ್ದು, ಪ್ರತಿ ನಿಮಿಷಕ್ಕೂ ಇಂತಹ ಪ್ರಶ್ನೆಗಳು ಪುಟಿದೇಳುತ್ತಿವೆ. ಉಳಿದ ಪ್ರಶ್ನೆಗಳನ್ನು ಬೋಫೋರ್ಸ್‌ದ ಮಲಾನಿಯವರಂತೆ ಮುಂದಿನ ಕಂತಿನಲ್ಲಿ ಕಳಿಸಲಾಗುವುದು. ನೀವು ಮಾತ್ರ ಸ್ವೀಡನ್ ದೂತವಾಸದವರಂತೆ ಗುಮ್ಮನೆ ಕೂಡದೆ ಈ ಕೂಡಲೇ ನಮ್ಮ ಮೇಲಿನ ಕೊಸ್ನೆಗಳಿಗೆ ಉತ್ತರಿಸಿ.

ಇಂತೀ ನಿಮ್ಮ ವಿಶ್ವಾಸಿ,
"ಗುರುವ"
ಕಾರ್ಯದರ್ಶಿ, ಧಾಕ್ರಮ



"ಹೆಣ್ಣು ಮಗು ಆಗಿದ್ದು ಅದೃಷ್ಟನಮ್ಮ. ಗಂಡಾಗಿದ್ರೆ, ಮುಂದೆ ಸೊಸೆನ ಹಿಂಸಿಸಿದೆ ಅಂತ ಅಪವಾದ ಬರ್‍ತಿತ್ತು !"

ಸಮಯಾ ಸಮಯವುಂಟೆ

—ಶೀನೂ

"ಕಮಲ ಮುಖಿ" "ಚಂದ್ರವದನೆ" "ಹರಿಣಾಕ್ಷಿ" ಎಂಬ ಸ್ತ್ರೀವಾಚಕ ಹೆಸರುಗಳನ್ನು ನೀವು ಕೇಳಿದ್ದೀರಿ. ಕ್ವಚಿತ್ತಾಗಿ ಈ ಹೆಸರುಗಳು ಅನ್ವರ್ಥಕವಾಗಿ ಕೂಡ ಇರಬಹುದು. ಆದರೆ "ಸಮಯ ಸಖಿ" "ವೇಳಾವದನ" ಅಥವಾ "ಗಡಿಯಾರ ಮುಖಿ" ಎಂಬ ಗಂಡು ಹೆಸರಿಗೆ ನನಗಿಂತ ಯೋಗ್ಯ ವ್ಯಕ್ತಿ ಖಚಿತವಾಗಿ ನಿಮಗೆ ಬೇರೆಲ್ಲೂ ಸಿಕ್ಕಲಾರದು.

ಪ್ರತಿ ಒಂದು ದಿನದ ಅವಧಿಯಲ್ಲಿ ನಾನು ಕನಿಷ್ಠ ನೂರಿನ್ನೂರು ಜನ ನನ್ನ ದೇಶ ಬಾಂಧವರಿಗೆ ಅವರು ಕೇಳಿದಾಗೆಲ್ಲ ನನ್ನ ಮುಂಗೈ ಗಡಿಯಾರ ನೋಡಿಕೊಂಡು ಸರಿಯಾದ "ಟೈಂ" ಹೇಳುತ್ತೇನೆ.

ಬೆಳಗಿನ ವಾಯು ವಿಹಾರಕ್ಕೆ ಹೊರಟಾಗ, ಆಫೀಸಿಗೆಂದು ಆತುರದಲ್ಲಿ ಬಸ್ಸು ಹಿಡಿಯಲು ಓಡುತ್ತಿರುವಾಗ, ಸಂಜೆ ಸುಸ್ತಾಗಿ ಮರಳಿ ಬರುತ್ತಿರುವಾಗ, ಅಂತೂ ಯಾವಾಗೆಂದರಾವಾಗ ಎಲ್ಲೆಂದರಲ್ಲಿ ನನ್ನನ್ನು ನೋಡುತ್ತಲೂ ಈ 'ಟೈಂ' ಕೇಳುವ ಜನಗಳಿಗೆಲ್ಲ ಇನ್ನಿಲ್ಲದ ಸಮಯ ಪ್ರಜ್ಞೆ ಜಾಗೃತವಾಗುತ್ತದೆ. ನನ್ನ ಮುಖದಲ್ಲಿ ಅಡಗಿರಬಹುದಾದ ಯಾವದೋ ಒಂದು ರಹಸ್ಯಮಯ ಅದ್ಭುತ ಶಕ್ತಿಯಿಂದ ಈ ಟೈಂ ಕೇಳುಗರಿಗೆಲ್ಲ ಒಂದು ಪ್ರಚೋದನೆ ದೊರೆತಂತಾಗಿ ಅವರೆಲ್ಲ ನನ್ನನ್ನು ಕಂಡೊಡನೆ "ಟೈಂ" "ಟೈಂ" ಎಂದು ಹಪಾಪಿಸುತ್ತಾರೆ. ಈ ಟೈಂ ಕೇಳುಗರಲ್ಲಿ ಕೂಡ ನಾನಾ ವಿಧ. ಕೆಲವರು ವಿನೀತರಾಗಿ "ಸಾರ್ ಟೈಂ ಎಷ್ಟಾಯಿತು ?" ಎಂದು ಕೇಳಿದರೆ, ಇನ್ನು ಹಲವರು ದಾರಿಯಲ್ಲಿ ಅವಸರದಿಂದ ನನ್ನನ್ನು ದಾಟುತ್ತಾ, "ಟೈಂ" "ಟೈಂ" ಎಂದು ತಮ್ಮ ಮುಂಗೈಗೆ ಬಡಿದು ಕೊಳ್ಳುತ್ತ ನನ್ನ ಗಮನ ಸೆಳೆಯುತ್ತಾರೆ. ನಾನು ನನ್ನ ನಡಿಗೆಯ ವೇಗವನ್ನು ಅವರ ವೇಗಕ್ಕೆ ಹಿಗ್ಗಿಸಿಯೋ, ಕುಗ್ಗಿಸಿಯೋ ಅಡ್ಜಸ್ಟ್ ಮಾಡಿಕೊಂಡು ಬಗ್ಗಿ ಕೈ ಗಡಿಯಾರ ನೋಡಿಕೊಂಡು "ಏಳೂ. ಮೂವತ್ತೆಂಟೂ.... ಎಂದು ಹೇಳುವ ಹೊತ್ತಿಗೆ "ಟೈಂ" ಕೇಳಿದ ಪುಣ್ಯಾತ್ಮ ಹತ್ತು ಹೆಜ್ಜೆ ಹಿಂದೆಯೋ, ಮುಂದೆಯೋ ಹೊರಟು ಹೋಗಿರುತ್ತಾನೆ.

ಶಾಲೆಗೆ ಹೊರಟ ಮಕ್ಕಳು 'ಅಂಕಲ್ ಟೈಂ ಪ್ಲೀಸ್' ಎಂದು ರಾಗವಾಗಿ

ಕೇಳಿದರೆ, ಕೆಲಸಕ್ಕೆ ಓಡುತ್ತಿರುವ ಕಾರ್ಮಿಕ "ಸಾರ್ ಏಳು ಗಂಟೆಯಾಯಿತಾ" ಎಂದು ಓಡುತ್ತಿರುತ್ತಾನೆ.

ನಾನೊ, ಏಕಾಂತ ಪ್ರಿಯ, ಅಂತರ್ಮುಖಿ, ಯಾವಾಗಲೂ ನನ್ನದೇ ಒಂದಿಲ್ಲೊಂದು ಗಹನ ಯೋಚನೆಯಲ್ಲಿರುತ್ತೇನೆ. ವಿಶೇಷತಃ ಬೆಳಗಿನ ವಾಯು ವಿಹಾರ ನನ್ನ ತೀರ ಖಾಸಗಿ ಸಮಯ, ಅಷ್ಟಲ್ಲದೇ ಅದೇ ವೇಳೆಗೆ ಅದೇ ದಾರಿಯಲ್ಲಿ ಇನ್ನೆಷ್ಟೋ ಗಡಿಯಾರಧರ, ಗಡಿಯಾರಿಣಿಯರು ಹೊರಟಿರುತ್ತಾರೆ. ಆದರೂ ಈ ಸಮಯಾತುರರಿಗೆಲ್ಲ ನನ್ನ ತಪೋಭಂಗ ಮಾಡುವದರಲ್ಲಿಯೇ ಹೆಚ್ಚಿನ ತೃಪ್ತಿ.

ಮೊನ್ನೆ ಹೀಗೇ ಆಯಿತು. ಬೆಳಗಿನ ಚಳಿಗಾಳಿಯಲ್ಲಿ ಸ್ವೆಟರ್, ಮಫ್ಲರ್, ತಲೆಟೋಪಿ ಸಮೇತನಾಗಿ ನನ್ನ ಮಟ್ಟಿಗೆ ನಾನು ರಸ್ತೆ ಬದಿಯಲ್ಲಿ ತಲೆ ತಗ್ಗಿಸಿ ನಡೆದಿದ್ದೆ. ತಲೆ ತುಂಬ ಗಹನ ವಿಚಾರಗಳು.

"ಕೇಸರಿ ಭಾತ್‌ಗೆ ಎಸ್ಸೆನ್ಸ್ ಹಾಕಿದರೆ ಚನ್ನಾಗಿರತ್ತೋ ಅಥವಾ ಹಾಗೇ ಚನ್ನಾಗಿರುತ್ತೋ ?...ಇಂತಹ ಚಳಿಯಲ್ಲಿ ನಾಲ್ಕು ಬಾದಾಮಿ ತುಂಡು...ಎರಡು ದ್ರಾಕ್ಷಿ...ಇನ್ನೆರಡು ಗೋಡಂಬಿ ಹಾಕಿ ಮಾಡಿದ...ಇನ್ನೂ ಹಬೆಯಾಡುವ ಬಿಸಿ ಬಿಸಿ ಕೇಸರಿಭಾತ್‌ಗೆ ಅದೇ ಕಾಸಿದ ತುಪ್ಪವನ್ನು—ಸ್ವಲ್ಪ ಧಾರಾಳವಾಗಿ ಸುರಿದು... ಘಮ್ಮೆಂದು...ಆಹಾ ಆಹಾ ಅದೇ ಮಹಾ ಸುದಿನSS"

"ಕೇಸರಿಭಾತಿಗೆ ತುಪ್ಪದ ಜತೆಯಿರೆ,...ಅದೇ ಮಹಾ ಸುದಿನSSS" ಎಂದು ನನ್ನ ಅತ್ಯಂತ ಪ್ರಿಯವಾದ ಕೇಸರೀಭಾತನ್ನು ಸವಿಯುತ್ತಾ ಹೊರಟಾಗ, ಯಾವನೋ ಒಬ್ಬ ದರಿದ್ರದವನು "ಸ್ಸಾ ಟೈಂ...ಸ್ಸಾ ಎಂದು ನನ್ನನ್ನು ಈ ಲೋಕಕ್ಕೆಳೆಯಬೇಕೆ ?

ಇನ್ನೊಮ್ಮೆ ಇದೇ ತೆರನ ಗಂಭೀರ ವಿಚಾರದಲ್ಲಿ ತಲೆ ತೊಡಗಿಸಿ ನಡೆದಿದ್ದೆ. "ಸುಬ್ಬಯ್ಯ ಶೆಟ್ಟಿ ಆಫೀಸಿನಲ್ಲಿ ಒಂದು ಲಕ್ಷ ರೂಪಾಯಿಗಳ ಬಿಲ್ಲಿಗೆ ಸಹಿ ಹಾಕಿಸಿಕೊಂಡು ಬರೀ ಮುನ್ನೂರು ಕೊಟ್ಟು ಹೋಗಿದ್ದ. ಲೆಕ್ಕದಲ್ಲಿ ಪ್ರತಿ ಬಿಲ್ಲಿಗೆ ಒಂದು ಪರ್ಸೆಂಟು ಕೊಡಬೇಕು. ಅದು ಮಾಮೂಲು. ಒಂದು ಲಕ್ಷಕ್ಕೆ ಒಂದು ಪರ್ಸೆಂಟ್ ಎಂದರೆ ಎಷ್ಟಾಗುತ್ತದೆ. ನೂರಕ್ಕೆ ಒಂದು...ಇನ್ನೂರಕ್ಕೆ ನಾಲ್ಕು ಛೇ...ಎಷ್ಟೋ ಆಗಲಿ...ಮುನ್ನೂರಂತೂ ಆಗುವುದಿಲ್ಲ...ಕೃತಘ್ನ ನನ ಮಗ ಸುಬ್ಬಯ್ಯ ಶೆಟ್ಟಿ... ನಿಯತ್ತಿಲ್ಲದವನು. ಎಂತಹ ದಗಲಬಾಜಿ ಮನುಷ್ಯ ಇದೇ ರೀತಿ ಮಾಮೂಲಿನಲ್ಲಿ ಮೋಸ ನಡೆದರೆ ಈ ದೇಶದ ಗತಿ ಏನಾದೀತು.... ಎಂದು ಭಾರತದ ಭವಿಷ್ಯದ ಬಗ್ಗೆ ಚಿಂತಿಸುತ್ತಾ ನಡೆದಿದ್ದೆ.

ಸರಿ ಆಗ ಯಾವನೋ ಒಬ್ಬ ರಸಭಂಗಿ ಬಂದು "ಸ್ಸಾ ಟೈಂ" ಎಂದ. ನಾನು ನನ್ನದೇ ತಂದ್ರಿಯಲ್ಲಿ "ಮುನ್ನೂರು" ಎಂದೆ. ಅವನು ಬಿಡದಲೆ "ಸ್ಸಾ,.ಟೈಂ..ಸಾ" ನಾನು ಕೇಳಿದ್ದು ಟೈಮು" ಎಂದ. ನಾನು ಈ ಸಲ ಎಚ್ಚೆತ್ತು ಮುಂಗೈ ನೋಡಿ ಕೊಂಡು "ಒಂದು ಪರ್‍ಸೆಂಟು" ಎಂದೆ. ಅವನು "ಈ ಆಸಾಮಿಗೆ ತಲೆ ಸರಿಯಿಲ್ಲ" ಎಂಬಂತೆ ನನ್ನನ್ನು ನೋಡುತ್ತಾ ನಡೆದ.

ಈ ಸಮಯ ಯಾಚಕರಲ್ಲಿ ಎರಡು ವಿಧ. ಕೆಲವರಿಗೆ ನಿಜವಾಗಿಯೂ ವೇಳೆ ಎಷ್ಟೆಂದು ತಿಳಿಯುವದೂ ಅಲ್ಲದೇ ಕರಾರುವಾಕ್ಕಾಗಿ ವೇಳೆ ಇಷ್ಟೇ ಎಂದು ತಿಳಿಯುವುದೂ ಅವಶ್ಯವಿದ್ದರೆ, ಇನ್ನು ಹಲವರಿಗೆ ಸಮಯ ಸರಿಯುವದೇ ಒಂದು ಸಮಸ್ಯೆಯಾಗಿ, ಇವರು ಸಮಯಾಸಮಯಕ್ಕೆ ಎಂದರೆ from time to time ಟೈಂ ಕೇಳುತ್ತಾ ಇರುತ್ತಾರೆ.

ಬೆಳಗಿನ ಷಿಫ್ಟಿಗೆ ಕಾರಖಾನೆಗೆ ಓಡುತ್ತಿರುವ ಕಾರ್ಮಿಕ ಕುಪ್ಪಣ್ಣ, ಮಕ್ಕಳನ್ನು ಶಾಲೆಗೆ ಹೊಡೆದುಕೊಂಡು ಹೊರಟಿರುವ ಕೆಲಸದಾಕೆ ಕಾಳವ್ವ, ಶಾಲೆಗೆ ಚಕ್ಕರ್ ಹೊಡೆದು ಸ್ಕೂಲು ಬಿಡುವ ಸಮಯಕ್ಕೆ ಸರಿಯಾಗಿ ಮನೆಗೆ ಹೊರಟ ಪಡ್ಡೆಗಳು, ಛಾಯಾಗೀತಕ್ಕೋ ಚಿತ್ರಹಾರಕ್ಕೋ ಸಮಯಕ್ಕೆ ಸರಿಯಾಗಿ ಹಾಜರಿರಬೇಕೆಂದು ಆತುರಾತುರವಾಗಿ ಓಡುತ್ತಿರುವ ಯುವಕರು, ಮಟಕಾ ನಂಬರುಗಳಿಗಾಗಿ ಓಡುತ್ತಿರುವ ಸತ್ಪ್ರಜೆಗಳು, ಇವರು ಇಂತಹವರಿಗೆಲ್ಲ ಕರೆಕ್ಟಾಗಿ ಸಮಯ ತಿಳಿದುಕೊಳ್ಳುವುದು ಅವಶ್ಯವಿರುತ್ತದೆ.

ಇನ್ನು, ಕಳೆದ ಹದಿನೈದು ವರುಷಗಳಿಂದ ಪಿಂಚಣಿ ತೆಗೆದುಕೊಳ್ಳುತ್ತಾ ಕಾಂಪೌಂಡಿನಲ್ಲಿ ಬಿಸಿಲು ಕಾಯಿಸುತ್ತ ಕುಳಿತ ಯಜಮಾನರು, ಮಧ್ಯಾಹ್ನದ ಬಿಸಿಲಿಗೆ ಗಿಡದ ಕೆಳಗೆ ಎಮ್ಮೆ ಮೇಯಿಸುತ್ತ ಕುಳಿತ ಮುದುಕಿ, ಯಾವದೋ ಒಂದು ಮುಚ್ಚಿದ ಮಳಿಗೆಯ ಕಟ್ಟೆಯ ಮೇಲೆ ಬೀಡಿ ಸೇದುತ್ತ ಇಸ್ಪೀಟಾಟದಲ್ಲಿ ಮಗ್ನರಾಗಿರುವ ಭಾವೀ ನಾಗರಿಕರು ಇವರಿಗೆಲ್ಲ "ಟೈಂ" ತಿಳಿದುಕೊಂಡು ಏನಾಗಬೇಕೋ ತಿಳಿಯದು.

ಎಷ್ಟೋ ವರುಷಗಳ ಹಿಂದೆ ನಾವು ಚಿಕ್ಕವರಿದ್ದಾಗ ನಮ್ಮ ಮನೆಗೆ ನಮ್ಮ ದೂರದ ಸಂಬಂಧಿ ಮುದುಕರೊಬ್ಬರು ಬರುತ್ತಿದ್ದರು. ಅವರು ಫ್ರುಟ್ಟು ಫ್ರುಟ್ಟು ಮುದುಕರು, ಅತಿಯಾದ ಉಬ್ಬಸು ಕೆಮ್ಮಲಿನಿಂದ ಬಳಲುತ್ತಿದ್ದರು. ರಾತ್ರಿಯೆಲ್ಲ ಕೆಮ್ಮುತ್ತ ಕೆಮ್ಮುತ್ತಲೇ "ಶೀನಾ ಟೈಂ ಎಷ್ಟಾಯಿತಪಾ;.." "ಶೀನೂ ವೇಳೆ ಎಷ್ಟು ?"... "ಶೀನಪ್ಪಾ ಎಷ್ಟು ಗಂಟೆಯಾಯಿತಪ್ಪಾ"— ಎಂದು ಗಳಿಗೆಗೊಮ್ಮೆ ಕೆಮ್ಮುತ್ತಲೇ ಹುಡುಗರಾದ ನಮ್ಮೆಲ್ಲರ ನಿದ್ರೆಯನ್ನೂ ಹಾಳು ಮಾಡುತ್ತಿದ್ದರು. ಒಮ್ಮೆ ರಾತ್ರಿ

ಯೆಲ್ಲ ಇವರು ಹೀಗೆ ನಿದ್ರೆ ಕೆಡಿಸಿ 'ಟ್ಯಾಂ' 'ಟ್ಯಾಂ' ಎಂದು ಹಲಬುತ್ತಿದ್ದಾಗ ಕದಲಿದ ನಾನು "ಏನು ಹೀಗೆ ಬಂದಳತೀ, ಟೈಂ ಟೈಂ ಅಂತ ಜೀವಾ ತಿಂತೀರಿ. ಈಗನಕಾ ಗಡಿಯಾರದ ಟೈಂ ಮಧ್ಯರಾತ್ರಿ ಎರಡೂ ಮುಕ್ಕಾಲು, ಇನ್ನು ನಿಮ್ಮ ಟೈಂ ಎಷ್ಟದನೋ ಆ ಪರಮಾತ್ಮನೇ ಬಲ್ಲ" ಎಂದಿದ್ದೆ. ಅವರಿಗೆ ಪಿಚ್ಚೆನ್ನಿಸಿರಬೇಕು. ನಾವೆಲ್ಲ ಹಸಿರೆಲೆಗಳು ಮುಸುಕಿನಲ್ಲಿಯೇ ನಕ್ಕಿದ್ದೆವು.

ಆಕಸ್ಮಿಕವೋ ಎಂಬಂತೆ ಮುಂದೆ ಎಂಟೇ ದಿನಗಳಲ್ಲಿ ಆ ವೃದ್ಧರು ಇಲ್ಲಿನ "ಟೈಂ" ಮುಗಿಸಿ ತಮ್ಮ ಲೋಕಕ್ಕೆ ಹೊರಟು ಹೋಗಿದ್ದರು. ನಾಲ್ಕು ದಿನ ನಮ್ಗೆಲ್ಲ ಏನೋ ಒಂದು ಮುಜುಗರವೆನಿಸುತ್ತಿತ್ತು.

ಅಂತೂ ಅವಶ್ಯಕತೆಯಿಂದಲೋ ಅಭ್ಯಾಸ ಬಲದಿಂದಲೋ ಆಬಾಲವೃದ್ಧರಾಗಿ ಎಲ್ಲರಿಗೂ ಸಮಯ ಸಮಯಕ್ಕೆ ಸಮಯ ಕೇಳುವುದು ಅಭ್ಯಾಸವಾಗಿದೆ. ಮತ್ತು ಅಂದು ನಮ್ಮ ಮನೆಯಲ್ಲಿ ಕೆಮ್ಮಿ ಕೆಮ್ಮಿ "ಟೈಂ" ಕೇಳಿ ಕೇಳಿ ತೀರಿ ಹೋದ ಆ ಹಿರಿಯರ ಶಾಪದಿಂದಲೋ ಏನೋ ಈ ಆಬಾಲವೃದ್ಧರೆಲ್ಲ ನನ್ನನ್ನೇ "ಟೈಂ" ಕೇಳುತ್ತಾರೆ.

ಹೆಚ್ಚಿನವರಿಗೆ ಕರಾರುವಾಕ್ಕಾಗಿ ಕರೆಕ್ಟಾಗಿ ಟೈಂ ಇಷ್ಟೇ ಎಂದು ಹೇಳಬೇಕಾಗಿಲ್ಲ. 'ಏಳು... ಎಂಟು—ಹನ್ನೊಂದು — ಮೂರು ಮುಕ್ಕಾಲು—ಸಾಡೇ ಬಾರಾ—ಪೌಣೆ ಪಾಂಚ್— ಎಂದು ಏನು ಹೇಳಿದರೂ ನಡೆದೀತು. ಅವರಿಗೆ ಯಾವನೋ ಒಬ್ಬ ಸತದೃಷ್ಟ 'ಪ್ರೇಕಾವದನ'ನಿಗೆ 'ಟೈಂ' ಕೇಳಿದ್ದೇ ತೃಪ್ತಿ. ಇನ್ನು ಕೆಲವು ಕೇಳುಗರಿಗೆ ಇದೂ ಬೇಡ, ಏರುವ ಇಳಿಯುವ ಬಿಸಿಲನ್ನು ನೋಡಿ ಏನೋ ಒಂದು ಅಂದಾಜಿನಲ್ಲಿ ಅರಚಿದರೂ ನಡೆದೀತು. ಇಂತಹರಿಗೆಲ್ಲ ನಾನು ಮುಂಗೈ ಗಡಿಯಾರ ನೋಡಿಕೊಂಡು, ಸಣ್ಣ ದೊಡ್ಡ ಮುಳ್ಳುಗಳನ್ನು ಪೋಣಿಸಿಕೊಳ್ಳುವ ಗೋಜಿಗೇ ಹೋಗುವುದಿಲ್ಲ. ಏನೋ ಒಂದು ಆ ಕ್ಷಣ ಬಾಯಿಗೆ ಬಂದುದನ್ನು "ಹತ್ತೂ ಇಪ್ಪತ್ತು—ಆರೂ ಮುವತ್ತು—ನಾಲ್ಕೂ ಎಪ್ಪತ್ತು—ಮೂರು ತೊಂಭತ್ತೆಂಟು" ಎಂದು ಕಿರುಚಿ ಮುಂದೆ ಹೋಗುತ್ತಿರುತ್ತೇನೆ.

ಎಷ್ಟೋ ಸಲ 'ಟೈಂ' ಕೇಳಿದ ಕೆಲವೊಬ್ಬರು ನನ್ನನ್ನು ಏನೋ ಒಂದು ಸಂಶಯಾತ್ಮಕ ರೀತಿಯಲ್ಲಿ ನೋಡುತ್ತಾರೆ. ಏಕೋ ತಿಳಿಯದು.

ಒಮ್ಮೆ ಮಾತ್ರ ನಾನು ಯಾವುದೋ ಕೆಟ್ಟ ಗಳಿಗೆಯಲ್ಲಿ ಸರಿಯಾದ ಸುಮುಹೂರ್ತವನ್ನು ಹೇಳದೇ ಪೇಚಿಗೆ ಸಿಕ್ಕಿಕೊಂಡೆ.

ಅಂದು, ತಲೆತುಂಬ ಆಫೀಸಿನ ಕೆಲಸವನ್ನೇ ತುಂಬಿಕೊಂಡು ನನ್ನ ಪಾಡಿಗೆ ನಾನು ಬೆಳಗಿನ ವಿಹಾರಕ್ಕೆ ನಡೆದಿದ್ದೆ. ಹಿಂದಿನ ದಿನ ಟ್ಯಾಪಿಗೆ ಕೊಟ್ಟ ಕಾಗದ ಗಳಲ್ಲೆಲ್ಲ ಸಿಕ್ಕಾಬಟ್ಟೆ ದೋಷಗಳಿದ್ದವು. ಸಿಪಾಯಿ ಸಿದ್ದಯ್ಯನನ್ನು ಕರೆದು "ಈ ಟ್ಯಾಪಿಸ್ಟು ಯಾರಯ್ಯಾ ಕರೆದುಕೊಂಡು ಬಾ" ಎಂದಿದ್ದೆ ಖಾರವಾಗಿಯೇ, ಬೃಹ ತ್ಕೋಪದಲ್ಲಿ" ಕೆಲ ಕ್ಷಣ ಬಿಟ್ಟು 36–25–36 ರ ಶಿಲಾಬಾಲಿಕೆಯೊಬ್ಬಳು ಒಳ ಬಂದು "ಚೇಳೂ ಹಾಗೂ ಮಹಿಳೆಯೂ" (scorpion and the lady) ಭಂಗಿಯಲ್ಲಿ ಒಮ್ಮೆ ಸೊಂಟ ಮುರಿದುಕೊಂಡು ನಿಂತು "ಸಾ–ನಾನೇ ಸಾ–ಟೈಪಿಸ್ಟು ಎಂದಳು. ನನ್ನ ಕರ್ಮ ಇನ್ನು ಇವಳನ್ನೇನು ಬಯ್ಯುವದೆಂದುಕೊಂಡು ಯಾವನೋ ಒಬ್ಬ ಹತಭಾಗ್ಯ ಗಂಡು ಟ್ಯಾಪಿಷ್ಟನ್ನು ಕರೆದು ಸಿಕ್ಕಾಬಟ್ಟೆ ಬಯ್ದು ಕಳಿಸಿದ್ದೆ.

ಸರಿ ಸಹಜವಾಗಿಯೇ ಅಂದು ಬೆಳಗಿನ ವಾಯು ವಿಹಾರಕ್ಕೆ ಹೊರಟಾಗ ತಲೆತುಂಬ 36–25–36ರ ಅಂಕಿ ಸಂಖ್ಯೆಗಳೂ, ಚೇಳುಗಳೂ ತುಂಬಿಕೊಂಡಿದ್ದವು. ಆಗ ಯಾವನೋ ಒಬ್ಬ ಕಾರಖಾನೆಯ ಬಾಯ್‌ಲರ್ ಸೂಟು ಧರಿಸಿದ ಯಮ ದೂತನಂತಹ ಕಾರ್ಮಿಕ, ಸಂಸ್ಕೃತ ಸುಭಾಷಿತಕಾರರು ಹೇಳುವಂತೆ "ಕಬಾಬಾಂ ತರ್ಗತ ಹಡ್ಡಿಯೋಪಾದಿ"ಯಲ್ಲಿ ಬಂದು "ಸಾ ಟೈಂ" ಎಂದ.

ನಾನು ಕೈಗಡಿಯಾರ ನೋಡಿಕೊಂಡು "36–25" ಎಂದೆ. ಅವನು ಮತ್ತೆ "ಟೈಂ–ಸಾ" ಎಂದ. ನಾನು ಈ ಸಲ "ಸ್ಸಾರಿ. 25–36" ಎಂದೆ.

ನಮ್ಮ ನೀಲಿ ಸೂಟಿನ ಯಮದೂತನಿಗೆ ಪಿತ್ತ ನೆತ್ತಿಗೇರಿತು. ಅವನು ಕಣ್ಣು ಕೆಂಪಗೆ ಮಾಡಿಕೊಂಡು, ಎತ್ತರದ ದನಿಯಲ್ಲಿ "ಏನು ಸಾರ್ ಟೈಂ ಕೇಳಿದರೆ ಏನೇನೋ ಹೇಳುತ್ತೀರಲ್ಲSS–35–ಅಂತೆ, 26–ಅಂತೆ ಅದೆಷ್ಟು ಗಂಟೆಗಳಿವೆರೀ ನಿಮ್ಮ ಗಡಿಯಾರದಲ್ಲಿ. ರ್‍ರೀ...ರ್‍ರಿ–ಯಜಮಾನರೇ ಎಷ್ಟುರೀ ನಿಮ್ಮ ಟೈಮು... ಎನ್ನುತ್ತ ಅಕ್ಕ ಪಕ್ಕದ ಜನಗಳನ್ನು ಜಮಾಯಿಸತೊಡಗಿದ.

ಅಂತೂ ಹಾಗೂ ಹೀಗೂ ಸಬೂಬು ಹೇಳಿ ಈ ನನ್ನ ದೇಶಬಾಂಧವನಿಂದ ಬಿಡಿಸಿಕೊಂಡು ಮನೆಗೆ ಬರುವದರಲ್ಲಿ ಸಾಕುಸಾಕಾಯಿತು. ಬಾಯ್‌ಲರ್ ಸೂಟಿನ ಯಮದೂತ, "ಎಷ್ಟುರೀ ನಿಮ್ಮ ಟ್ಯಾಂ" ಎಂದು ಕೇಳಿದ್ದಕ್ಕೋ ಏನೋ ನನಗೆ ಅಂದು ನಮ್ಮ ಮನೆಯಲ್ಲಿ ಕೆಮ್ಮಿ ಕೆಮ್ಮಿ ನಮ್ಮಿಂದ ಗೇಲಿ ಮಾಡಿಸಿಕೊಂಡು ತೀರಿ ಹೋದ ವೃದ್ಧರ ನೆನಪಾಯಿತು. ವಾಕಿಂಗ್ ಮುಗಿಸಿ ಮನೆಗೆ ಬರುತ್ತಿದ್ದಂತೆ ಮೈ ನಡುಕ ಶುರುವಾಯಿತು. ಏನೋ ತಲೆ ಸುತ್ತು, ಎದೆಯ ಬಳಿ ಥಳುಕು,

ಎಡಗೈಯಲ್ಲಿ ಸೆಳೆತ. ಎರಡು ದಿನ ಆಫೀಸಿಗೆ ರಜೆ ಹಾಕಿದೆ. ಇನ್ನೇನು ನಲವತ್ತಾಯಿತಲ್ಲ. ಯಾವಾಗ ಹೇಗೋ ಏನೋ ? ಯಾರ ಟೈಮು ಎಷ್ಟೋ ? ನನ್ನದಷ್ಟೇ ? ಎಂದು ಚಿಂತಿತನಾದೆ.

ಸರಿ ಕೆಲವು ದಿನಗಳಲ್ಲಿ ಈ ಎದೆನೋವು ಎಡಸೆಳೆತ ಹೆಚ್ಚಾದವು. ಯಾರಾದರೂ ಟೈಂ ಕೇಳಿದರಂತೂ ಈ ನೋವು ವಿಪರೀತವಾಗುತ್ತಿತ್ತು. ಇಂತಹದೇ ಒಂದು ದಿನ ಯಾವನೋ ಪುಣ್ಯಾತ್ಮ 'ಟೈಂ' ಕೇಳಿ ನನ್ನ ಎದೆ ನೋವನ್ನು ಹೆಚ್ಚಿಸಿದ ದಿನ, ಇನ್ನು ಹೀಗೆ ಬಿಟ್ಟು ಪ್ರಯೋಜನವಿಲ್ಲವೆಂದು ನಾನು ನನ್ನ ಭಾರ್ಯೆ ಗುಂಡಮ್ಮನನ್ನು ಕರೆದು ಪರಿಸ್ಥಿತಿಯನ್ನು ವಿವರಿಸಿ, ನನ್ನ ನೋವಿನ ಲಕ್ಷಣಗಳನ್ನೆಲ್ಲ ಹೇಳಿ "ಇದೆಲ್ಲ ಬಹುಶಃ ಹೃದಯ ವಿಕಾರದ ಲಕ್ಷಣ...ಯಾವಾಗ ಏನಾಗುತ್ತದೋ ತಿಳಿಯದು..." ಎನ್ನುತ್ತಿದ್ದಂತೆಯೇ

ಗುಂಡಮ್ಮ "ಏನ್ರೀ ಇದು—ಅಯ್ಯೋ—ಒಮ್ಮೆಲೇ ಹೀಗೆಕ್ರೀ ಮಾತಾಡ್ತೀರಿ?" ಎಂದು ಬಿಕ್ಕಿದಳು.

ನಾನು ಬಿಡದಲೆ, "ಕೇಳೆ—ನಲವತ್ತರ ನಂತರ ಈ ಎದೆನೋವು ಒಳ್ಳೆಯದಲ್ಲ. ಆದರೆ ನೀನೇನೂ ಚಿಂತಿಸಬೇಡ—ಐವತ್ತು ಸಾವಿರಕ್ಕೆ ವಿಮೆ ಇಳಿಸಿದ್ದೇನೆ" ಎಂದು ಹೇಳುತ್ತಿದ್ದಂತೆಯೇ

ಗುಂಡಮ್ಮ. "ಅಯ್ಯೋ—ಅಯ್ಯೋ—ಏನ್ರೀ ಇದೆಲ್ಲ—" ಅಂದಳು.

ನಾನು "ಪುಟ್ಟನದೊಂದು ಗ್ರ್ಯಾಡ್ಯುಯೇಶನ್ ಅಂತ ಆಗಿದ್ದಾರೇ—"

ಗುಂಡಮ್ಮ : "ಅಯ್ಯೊ—"

ನಾನು "ಮಗಳಿಗೊಂದು ಮದುವೆ ಅಂತ ಆಗಿದ್ದರೆ—"

ಗುಂಡಮ್ಮ . "ಆಯ್ಯೋ—" ಎಂದು ಬಿಕ್ಕಿ ಬಿಕ್ಕಿ ರೋದಿಸತೊಡಗಿದಳು.

ನಾನು ಕರುಣೆಯಿಂದ:"ಗುಂಡೀ—ಎಲ್ಲರೂ ಒಂದಿಲ್ಲೊಂದು ದಿನ ಹೋಗಲೇ ಬೇಕಲ್ಲವೇ —ದೇವರಿದ್ದಾನೆ ಬಿಡು—" ಎನ್ನುತ್ತಿದ್ದಂತೆಯೇ

ಗುಂಡಮ್ಮ . "ಅದ್ಸರಿರೀ–ಆದರೆ ಐವತ್ತು ಸಾವಿರದಲ್ಲಿ ದೇವರಾದರೂ ಏನು ಮಾಡುತ್ತಾನರೀ—" ಎಂದು ಎದೆ ಬಡಿದುಕೊಳ್ಳುತ್ತ ನನ್ನ ಮೂತಿ ತಿವಿದಳು.

ಅಷ್ಟಲ್ಲದೇ ಹೇಳುತ್ತಾರೆಯೇ ಭಾರತೀಯ ಮಹಿಳೆಯ ಪತಿಭಕ್ತಿ ಅನ್ಯಾದೃಶವಾದುದೆಂದು !

ಅಂತೂ ಹಾಗೂ ಹೀಗೂ ದಿನ ಕಳೆಯುತ್ತಿತ್ತು. ಎರಡು ದಿನ ಯಾರೂ ಟೈಂ ಕೇಳದಿದ್ದರೆ ಸರಿಯಾಗಿಯೇ ಇರುತ್ತಿದ್ದೆ. ಮಾರನೆಯ ದಿನ ಯಾವನಾದರೂ ಪುಣ್ಯಾತ್ಮ ಟೈಂ ಕೇಳಿಬಿಟ್ಟರೆ, ಮತ್ತೆ ಎದೆನೋವು ಉಲ್ಬಣಿಸುತ್ತಿತ್ತು. ಇತ್ತೀಚೆಗೆ ನಾನು ಕೈಗಡಿಯಾರ ಕಟ್ಟುವದನ್ನೇ ಬಿಟ್ಟಿದ್ದೆ. ನನ್ನ ಪಾಡಿಗೆ ನಾನು ತಲೆ ತಗ್ಗಿಸಿ ರಸ್ತೆ ಬದಿಗೆ ನಡೆಯಲು ಅಭ್ಯಸಿಸುತ್ತಿದ್ದೆ. ಆದರೂ ಒಳಗೊಳಗೇ ಅಳುಕು. ಯಾವನಾದರೂ ನಿರ್ದಯಿ ಸಮಯ ಕೇಳುಗ ಬಂದರೆ ಹೇಗೆಂದು ಆಗೀಗ ಬೆಚ್ಚಿ ಬೀಳುತ್ತಿದ್ದೆ. ತಗ್ಗಿಸಿದ ತಲೆಯನ್ನು ಮಧ್ಯೆ ಮಧ್ಯೆ ನಸುವೇ ಎತ್ತರಿಸಿ ಎದುರಿನಿಂದ ಬರುವವರನ್ನು ಕದ್ದು ನೋಡುತ್ತಿದ್ದೆ. ಸಂಶಯಾತ್ಮಕ ವ್ಯಕ್ತಿಗಳಾರಾದರೂ ಕಂಡರೆ ರಸ್ತೆಯ ಈ ಬದಿಯಿಂದ ಆ ಬದಿಗೂ ಆ ಬದಿಯಿಂದ ಈ ಬದಿಗೂ ಕಬಡ್ಡಿ ಯಾಡುತ್ತಿದ್ದೆ.

ಇಷ್ಟಕ್ಕೂ ಯಾರಾದರೂ 'ಟೈಂ' ಕೇಳಿದರೆ ಕೂಡ ಕೇಳಿಸಿಕೊಳ್ಳದವರಂತೆ ನಡೆದು ಬಿಡುತ್ತಿದ್ದೆ. ಇತ್ತೀಚೆಗೆ ಆರೋಗ್ಯ ಸ್ವಲ್ಪ ಸುಧಾರಿಸುತ್ತಿತ್ತು.

ಆದರೆ ಅಕಟಾಽ !—ಮೊನ್ನೆ ಇದೇ ರೀತಿ ತಲೆ ತಪ್ಪಿಸಿ ಮಾರ್ನಿಂಗ ವಾಕಿಗೆ ಹೊರಟಿದ್ದಾಗ, ಮತ್ತೆ ಅದೇ ಆ ಕಡು ನೀಲಿ ಅಂಗಿಯ ಯಮದೂತ ಪ್ರತ್ಯಕ್ಷನಾಗಿ ಗೊಗ್ಗರ ದನಿಯಲ್ಲಿ

"ಟೈಂ—ಟೈಮು—ಟೈಮುರೀ—ನಿಮ್ಮನ್ನೇ ಕೇಳಿದ್ದು ಎಂದ ಸರಿ. ಎದೆ ನಡುಕ ಜೋರಾಯಿತು. ಮುಖವೆಲ್ಲ ಬೆಮ್ಮನೆ ಬೆವತೆ. ಕೈಕಾಲುಗಳಲ್ಲಿ ಸೆಳೆತ ಶುರುವಾಯಿತು. ಹಾಗೂ ಹೀಗೂ ಮನೆಗೆ ಬಂದವನೇ "ಗುಂಡೀ—ಎದೆನೋವು ಹೆಚ್ಚಾಗಿದೆ. ಯಾವ ಕ್ಷಣ ಹೇಗೋ ತಿಳಿಯದು. ಸ್ವಲ್ಪ ದೇವರ ಕೋಣೆಯ ಬಾಗಿಲು ತೆಗೆ" ಎಂದೆ.

ಗುಂಡಮ್ಮ. "ಅಯ್ಯೋ ಏನ್ರೀ ಹೀಗೆ ಮನೆಯಲ್ಲಿ ಮಕ್ಕಳು ಕೂಡ ಯಾರೂ ಇಲ್ಲ" ಎಂದು ಕಣ್ಣೀರು ತೆಗೆದಳು.

ನಾನು "ಒಳ್ಳೆಯದೇ ಆಯಿತು. ಟೈಂ ಹೇಗೋ ಏನೋ–ಸ್ವಲ್ಪ ದೇವರ ಮನೆಯ ಬಾಗಿಲು ತೆರೆದು ಆ ಭಾಗೀರಥೀ ಗಿಂಡಿ— ಎನ್ನುತ್ತಿದ್ದಂತೆಯೇ

ಗುಂಡಮ್ಮ . "ದೇವರೇ ಅದೆಲ್ಲ ಯಾಕ್ರೀ ಈಗ—"

ನಾನು "ಕೇಳೇ—ಆ ಭಾಗೀರತೀ ಗಿಂಡಿ—"

ಗುಂಡಮ್ಮ . ಅಯ್ಯೋ—ಡಾಕ್ಟರನ್ನಾದರೂ ಕರೀತೀನ್ರಿ"

ನಾನು "ಬೇಡ–ಬೇಡ—ಆ ಭಾಗೀರತೀ—"

ಗುಂಡಮ್ಮ . "ಸ್ವಲ್ಪ ಸಹಿಸಿ ಕೊಳ್ರೀ—ಪಕ್ಕದ ಮನೆಯವರನ್ನಾದರೂ ಕರೀತೀನ್ರೀ—"

ನಾನು ಬೇಡವೇ.. ಆ ಭಾಗೀರತೀ—ಗಿಂಡಿ—"

ಗುಂಡಮ್ಮ . "ಅಯ್ಯೋ—"


ನಾನು "ಭಾಗೀರತಿ—"

ಗುಂಡಮ್ಮ . "ಅಯ್ಯೋ—"


ಇನ್ನು ಹೀಗೆ ಬಿಟ್ಟು ಪ್ರಯೋಜನವಿಲ್ಲವೆಂದು ನಾನು ಗುಂಡಮ್ಮನ ಬಾಯಿಯನ್ನು ಬಿಗಿಯಾಗಿ, ಮಾತನಾಡದಂತೆ ಹಿಡಿದು ಗಟ್ಟಿಯಾಗಿ ಅರಚಿದೆ.

"ಅಲ್ಲವೇ—ಯಾರ ಟೈಂ-ಎಷ್ಟೆಂದು ಹೇಗೆ ಹೇಳುವದು. ಬೇಗನೇ ದೇವರ ಮನೆಯ ಬಾಗಿಲು ತೆರೆದು ಮಾಡದಲ್ಲಿ ಭಾಗೀರತೀ ಗಿಂಡಿಯ ಪಕ್ಕದ ಸಣ್ಣ ಸ್ಟೀಲು ಡಬ್ಬದಲ್ಲಿ ಒಳ್ಳೇ ಕೇಶರ, ದ್ರಾಕ್ಷಿ, ಬಾದಾಮಿ ಎಲ್ಲ ಇದೆ. ಅವನ್ನೆಲ್ಲ ಹಾಕಿ ಬಿಸಿ ಬಿಸಿ ಕೇಸರೀಭಾತ್ ಮಾಡೇ—" ಎಂದೆ.

ನನ್ನ ಜೇಬಿನಲ್ಲಿದ್ದ ನೂರು ರೂಪಾಯಿ ನೋಟನ್ನ ಯಾರೋ ಜೇಬು ಗಳ್ಳರು ಲಪಟಾಯಿಸಿದ್ದಾರೆ ಅಂತ ಖಾಸಗಿ ಶಾಲಾ ಮಾಸ್ತರು ಪೋಲೀಸ್ ಠಾಣೆ ಯಲ್ಲಿ ದೂರಿತ್ತಾಗ, "ನಿಮಗೆಲ್ರೀ ಬಂತು ನೂರು ರೂಪಾಯಿ ನೋಟು ?" ಅಂತ ಅವನನ್ನೇ ದಸ್ತಗಿರಿ ಮಾಡಿದರಂತೆ.



ಶುಭಾಶಯಗಳೊಂದಿಗೆ



ಎಸ್. ವಿ. ಆರ್. ಏಜನ್ಸೀಸ್

ಬೆಂಗಳೂರು

REGISTERED No. BGW-180

Printed by V. R. NATH for the Publisher M. SHIVA KUMAR. Published and owned by M. SHIVA KUMAR, 36, 6th Main Road, Malleswarm, Bangalore 560 003. Printed at IMPRESSIONS, 404, Sampige Road, Malleswaram, Bangalore-560 003. Editor: M. SHIVA KUMAR.